reckless expenditure by this Government. I believe he should not have said that. He had something of his own to show at some time. Now he holds the mirror before this Government and says: "Look at it. You cut an uncouth figure", and I ask him "Let it be held to your own face." This Government's handicrafts are all a legacy of the other Government. To take one instance, the food policy. This Government has been compelled by circumstances to spend over Rs. 10 crores for food alone, subsidies and otherwise. Is this not a commitment which that Government passed on to this Government? Well, it was in the power of that Government to have prevented this crisis, this situation. They had ample resources.

They had accumulated resources. Why did they not build up industries and agriculture so as to put the State in a position of self-sufficiency? To-day those who had been Ministers then feel now that this Government had spent recklessly. But why did you make them spend crores on food alone? It was within your power to have prevented this enormous expenditure. Why did you not attend to agriculture? It is a very sad feature. They must remember now that they did not give any attention to the Agricultural Department. It was considered to be a step-daughter, the Cindrella of the Government. These gentlemen have no rights to say that this Government had wasted the resources or had spent away the funds in a way other than deserving. Then, regarding Industries, they could have developed these Industries so as to make them give good returns. How many industries had they developed in such a way as to be profitable? Why did they not do it? They had ample money and it was within their power to have done it. This Government have no money. But they had ample resources. Why did they not improve these industries and make them prosperous?

Mr. SPEAKER.—Let us know whether in your view this resolution is necessary or not.

Sri M. GOVINDA REDDY.—This resolution is quite unnecessary. There is a Finance Committee which goes into the finances of the State. There is then the Estimates Committee which goes into the estimates. One is a statutory committee and the other is an advisory committee. Both these committees give due attention to the finances of the State. They are ample to reconsider the financial position, and so there is no justification for a fresh committee to go into the finances of the State. That is my point. The resources of the State, they must appreciate, though not quite sound, could not be otherwise than what they are now. It is not only the case with Mysore Government. The India Government also which has added resources to it, finds itself today in deficit. It is not a question peculiar to India also. This is a question which is peculiar to the whole world. New situations have come up. A new psychology has come over. And new responsibilities have fallen upon the Governments of the world. Things which no Government had ever conceived before, have now come to engage the attention of the Government. Sir, there could not have been a stronger Government than the Government of Great Britain. What is its position to-day? It is tottering. But for the devaluation scheme unfortunately for us and fortunately for them, in which they were able to trap the other commonwealth countries, but for that devaluation scheme to-day the Government of Great Britain would have been on the verge of bankruptcy. That situation should be appreciated by all States. This Government have a thousand responsibilities which that Government did not have. This is a new atmosphere and a new situation in which we find ourselves to-day. Hon'ble Members should therefore appreciate the difficulties of the Government. This Government cannot take recourse to fresh taxation, because the people are already heavily taxed and all the sources of taxation have been exploited. It was open to the Hon'ble Members to have pointed out new sources of taxation and income. Let them come forward with constructive suggestions. To say that this Government have

(SRI M. GOVINDA REDDY).

w sted the resources, is a thing which this House cannot accept.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).— ಸ್ವಾಮಿ, ಶ್ರೀಮಾನ್ ಚಂದ್ರಶೇಖರಯ್ಯನವರು ತಂದಿರುವ ಈ ನಿರ್ಣಯವನ್ನು ನಾನು ವಿರೋಧಿಸಬೇಕಾಗಿದೆ. ಈ ನಿರ್ಣಯವನ್ನು ತರುವುದರಲ್ಲಿ ಅವರ ಉದ್ದೇಶ ಘನವಾದುದಾಗಿದ್ದರೂ ಇಂಥ ನಿರ್ಣಯದ ಅಗತ್ಯ ಏನೇನೂ ಇಲ್ಲ ಎನ್ನುವುದು ಎದ್ದು ಕಾಣುತ್ತದೆ. ಮೊನ್ನೆ ಮೊನ್ನೆ ತಾನೆ ಶ್ರೀ ಬಿ. ಎಸ್. ರಾಘವೇಂದ್ರರಾಯರ ಶಿಫಾರಸ್ಸುಗಳನ್ನೊಳಗೊಂಡ ವರದಿ ಸರ್ಕಾರದವರ ಕೈ ಸೇರಿದೆ. ಸರ್ಕಾರದವರು ಈ ಸಭೆಯ ಈ ಅಧಿವೇಶನದಲ್ಲೂ ವತ್ತು, ಹಿಂದಿನ ಅಧಿವೇಶನದಲ್ಲೂ ಕೊಟ್ಟ ಕೆಲವು ಉತ್ತರಗಳಿಂದ ಶ್ರೀರಾಯರು ಸೂಚನೆ ಮಾಡಿರುವ ಕೆಲವು ಸಲಹೆಗಳನ್ನು ಸರ್ಕಾರದವರು ಪರ್ಯಾಲೋಚನೆಯಲ್ಲಿರುತ್ತಾರೆ ಮತ್ತು ಸಾಧ್ಯವಾದ ಕಡೆ ಅಷ್ಟಾಣಿಗೆ ತರುತ್ತಿದ್ದಾರೆ ಎಂದು ಮತ್ತು ತಂದಿದ್ದಾರೆಂದು ವ್ಯಕ್ತವಾಗಿದೆ. ಆ ವರದಿಯಲ್ಲಿ ಶ್ರೀರಾಘವೇಂದ್ರರಾಯರು ಅನೇಕ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಯಾವ್ಯಾವ ಭಾಗದಲ್ಲಿ ವೆಚ್ಚ ಕಡಮೆ ಮಾಡಬೇಕು ಯಾವ್ಯಾವ ಭಾಗದಲ್ಲಿ ಹಣ ಉಳಿತಾಯ ಮಾಡಬಹುದು ಎಂಬುದನ್ನು ಸೂಚಿಸಿದ್ದಾರೆ. ಆ ವರದಿಯಲ್ಲಿ ಸೂಚಕವಾಗಿರುವ ಸಲಹೆಗಳನ್ನೆಲ್ಲಾ ಪೂರ್ಣವಾಗಿ ಆಚರಣೆಗೆ ತಂದಿದೆ ಅಥವಾ ತರುವುದಕ್ಕಾಗುವುದಿಲ್ಲ ಎಂದಾಗಲೀ ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕಾದ ಸಲಹೆಯೇನೂ ಇಲ್ಲವೆಂದಾಗಲೀ ಸರ್ಕಾರದವರು ತೀರ್ಮಾನಕ್ಕೆ ಬಂದಿಲ್ಲ. ಆ ಸಲಹೆಗಳ ಸಂಬಂಧವಾಗಿ ಸರ್ಕಾರದವರು ಪೂರ್ಣವಾಗಿ ಯಾವ ಒಂದು ತೀರ್ಮಾನಕ್ಕೂ ಬಾರದೆ ಸಾಧ್ಯವಾದ ಸಂದರ್ಭಗಳಲ್ಲೆಲ್ಲಾ ಆ ಸಲಹೆಗಳನ್ನು ಅನುಸರಿಸಿ ಕೆಲಸ ಮಾಡುತ್ತಿರುವಾಗ ಅದೇ ಉದ್ದೇಶಕ್ಕಾಗಿ ಇನ್ನೊಂದು ಸಮಿತಿಯನ್ನು ನೇಮಕ ಮಾಡಬೇಕೆಂದು ಹೇಳುತ್ತಿರುವುದು ಅಷ್ಟು ಅಗತ್ಯವಾಗಿ ಕಾಣುವುದಿಲ್ಲ. ಶ್ರೀ ಚಂದ್ರಶೇಖರಯ್ಯನವರು ತಮ್ಮ ನಿರ್ಣಯದಲ್ಲಿ ವೆಚ್ಚ ತಗ್ಗಿಸಬೇಕೆಂದು ಹೇಳಿರುವುದರ ಜೊತೆಗೆ ದೇಶದ ಆದಾಯದ ಬಾಬುಗಳನ್ನು ಯಾವ ರೀತಿ ಪೆಚ್ಚಿಸಬಹುದು ಎಂಬುದನ್ನು ಸಲಹೆ ಮಾಡಲು ಒಂದು ಸಮಿತಿ ಮಾಡಬೇಕೆಂದು ಹೇಳಿದ್ದಾರೆ. ಸಾಮಾನ್ಯವಾಗಿ ಈ ನಿರ್ಣಯವನ್ನು ನೋಡಿದರೆ ಅಂತಹ ಸಮಿತಿಯ ಅಗತ್ಯವಿದೆ ಎಂದು ಕಂಡರೂ ಸಹ ವಿಷಯಗಳನ್ನು ಸ್ವಲ್ಪ ಕೂಲಂಕಷವಾಗಿ ವಿಚಾರ ಮಾಡುವುದಾದರೆ ನಮ್ಮ ದೇಶದಲ್ಲಿ ಆದಾಯ ಯಾವ್ಯಾವ ಬಾಬುಗಳಿಂದ ಹೆಚ್ಚಿಸಿಕೊಳ್ಳಬಹುದು ಎಂಬುದು ಹೊಸ ವಿಚಾರವಲ್ಲ ಮತ್ತು ವೆಚ್ಚವನ್ನು ಯಾವ ರೀತಿ ತಗ್ಗಿಸಬೇಕೆನ್ನುವುದೂ ಶ್ರೀರಾಘವೇಂದ್ರರಾಯರ ವರದಿಯಲ್ಲದೆ. ಅದು ಸರ್ಕಾರದ ಪರ್ಯಾಲೋಚನೆಯಲ್ಲಿದೆ. ಸರ್ಕಾರದವರು ವೆಚ್ಚ ಕಡಮೆ ಮಾಡಕೂಡದೆಂದು ನಿರ್ಧಾರವಾದ ಮನಸ್ಸು ಮಾಡಿಲ್ಲ. ಆದ್ದರಿಂದ ಸಮಿತಿಗಳನ್ನು ಹದೇ ಹದೇ ನೇಮಕ ಮಾಡುವುದರಿಂದ ಕಾಲ ವಿಳಂಬವಾಗುತ್ತದೆ ಮತ್ತು ಹಣ ವೆಚ್ಚವಾಗುತ್ತದೆ ಅಷ್ಟು ಏನಾ ಅವುಗಳಿಂದ ತಕ್ಕ ಅನುಕೂಲ ಅಥವಾ ನೀರೀಕ್ಷಿಸಿದಷ್ಟು ಪ್ರಯೋಜನ ಆಗುವುದಿಲ್ಲ ಎಂದು ಹೇಳಬೇಕಾಗಿದೆ.

ಎರಡನೆಯದಾಗಿ ಒಂದು ಸಮಿತಿಯಾದ ಮೇಲೆ ಮತ್ತು ಅದಕ್ಕೆ ಒಬ್ಬ ವ್ಯಕ್ತಿಯನ್ನು ನೇಮಿಸಿದ ಮೇಲೆ ಅವರು ಬಹಳ ಕಾಲ ತೆಗೆದುಕೊಂಡು ವರದಿಯನ್ನು ತಯಾರಿಸುತ್ತಾರೆ. ಸಮಿತಿಯಲ್ಲಿ ನಾಲ್ಕಾರು ಜನರು ಕೂತು ಯೋಜನೆ ಮಾಡುವಾಗಲೂ ಕಾಲವಿಳಂಬವಾಗಬೇಕಾಗುತ್ತದೆ. ಆ ಮೇಲೆ ಸರ್ಕಾರದವರು ಆಲೋಚನೆ ಮಾಡುವುದರಲ್ಲಿ ಒಂದೆರಡು ವರ್ಷ ಕಳೆಯುತ್ತದೆ. ಹೀಗೆ ನಾವು ಸಮಿತಿ ನೇಮಕ ಮಾಡಿದ ಮೇಲೆ ಎಲ್ಲಾ ವಿಚಾರಗಳನ್ನೂ ಪರಿಶೀಲಿಸಿ ಸಲಹೆ ಮಾಡುವಾಗ್ಗೆ ಬಹಳವಷ್ಟರಿಗೆ ಪರಿಸ್ಥಿತಿ ಬದಲಾಯಿಸಿರುವುದರಿಂದ ಉದ್ದೇಶ ನೆರವೇರುವುದಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ ಇಂಥ ಸಮಿತಿಯಿಂದ ಪ್ರಯೋಜನವಾಗುವುದಿಲ್ಲ.

ಮತ್ತೊಂದು ಅಂಶ ಈ ನಿರ್ಣಯವನ್ನು ಕಳುಹಿಸಿದಾಗ ಶ್ರೀ ಚಂದ್ರಶೇಖರಯ್ಯನವರಿಗೆ ಗೊತ್ತಿರಲಿಲ್ಲವೆಂದು ಕಾಣುತ್ತದೆ. ಸರ್ಕಾರದವರು ಕೆಲವು ಸಲಹಾ ಸಮಿತಿಗಳನ್ನು ಮತ್ತು ಎಸ್ಟಿಮೇಟ್ಸ್ ಸಮಿತಿಯನ್ನು ನೇಮಕ ಮಾಡಬೇಕೆಂದಿದ್ದು ಶ್ರೀ ಚಂದ್ರಶೇಖರಯ್ಯನವರಿಗೆ ಈ ನಿರ್ಣಯ ಕಳುಹಿಸುವಾಗ ಗೊತ್ತಿರಲಿಲ್ಲವೆಂದು ಕಾಣುತ್ತೆ. ಈ ಸಭೆಯಲ್ಲಿ ಈ ಎಲ್ಲ ಸಮಿತಿಗಳೂ ನೇಮಕವಾಗಿವೆ. ಈ ಸಮಿತಿಗಳಲ್ಲಿ ಯಾವ್ಯಾವ ಭಾಗದಲ್ಲಿ ಹಣದ ವೆಚ್ಚ ಕಡಮೆ ಮಾಡಬಹುದು ಎಂಬ ವಿಚಾರಗಳು ಬರುತ್ತವೆ. ಇದಕ್ಕಿಂತ ಹೆಚ್ಚಾಗಿ ಎಸ್ಟಿಮೇಟ್ಸ್ ಸಮಿತಿಯಿದೆ. ಬಡ್ಜೆಟ್ಟಿನಲ್ಲಿ ಬರುವ ಪ್ರತಿಯೊಂದು ಅಂಶವೂ ಆ ಸಮಿತಿಯ ಪರ್ಯಾಲೋಚನೆಗೆ ಬಂದು ಅಲ್ಲಿ ತೀರ್ಮಾನವಾಗಿ ಸಲಹೆ ಯಾವ ರೀತಿ ಬರುತ್ತದೋ ಅದರ ಪ್ರಕಾರ ಬಡ್ಜೆಟ್ ತಯಾರಾಗಬೇಕಾಗುತ್ತದೆ.

ಸರ್ಕಾರದ ನೀತಿಯ ಬಗ್ಗೆ ಯಾವ ಯಾವ ಇಲಾಖೆಯಲ್ಲಿ ಹೇಗೆ ನಡೆಯಬೇಕೆಂಬುದನ್ನೂ ಕುರಿತು ವಿಮರ್ಶಿಸಿ ಸಲಹೆ ಮಾಡಲು ಈ ಸಭೆಯ ಮಾನ್ಯ ಸದಸ್ಯರುಗಳನ್ನೇ ಒಳಗೊಂಡ ವಿವಿಧ ಸಮಿತಿಗಳನ್ನು ಸರ್ಕಾರದವರು ರಚಿಸಿದ್ದಾರೆ. ಈ ಸಮಿತಿಗಳಲ್ಲಿ ಆಯಾ ಇಲಾಖೆಗೆ ಸಂಬಂಧಪಟ್ಟ ವಿಷಯಗಳನ್ನೆಲ್ಲಾ ವಿಮರ್ಶಿಸಿ ಸಲಹೆ ಮಾಡಬಹುದು. ಹೀಗೆ ಈ ನಿರ್ಣಯವನ್ನು ತಂದಿರುವ ಶ್ರೀಮಾನ್ ಚಂದ್ರಶೇಖರಯ್ಯನವರ ಉದ್ದೇಶ ನಾನಾ ರೀತಿಯಲ್ಲಿ ನೆರವೇರುವುದಕ್ಕೆ ಅವಕಾಶವಿರುವಾಗ ಇನ್ನೂ ಒಂದು ಸಮಿತಿಯನ್ನು ಮಾಡಿ ಅವರು ಪರಿಶೀಲಿಸಿ ಅವರ ವರದಿ ಬರಬೇಕಾದರೆ ಕಾಲವಿಳಂಬವಾಗುತ್ತದೆ. ಅವರು ಅಂಕ ಅಂಶಗಳನ್ನು ಶೇಖರ ಮಾಡಿ ಸಾಕ್ಷಿಗಳನ್ನು ವಿಚಾರ ಮಾಡಿ ಅವರ ಅಭಿಪ್ರಾಯಗಳನ್ನು ಶೇಖರಿಸುವುದರಲ್ಲೇ ಎಷ್ಟೋ ಕಾಲ ಕಳೆದುಹೋಗುತ್ತದೆ. ಅವರು ತಮ್ಮ ವರದಿಯನ್ನು ಕೊಡುವ ಹೊತ್ತಿಗೆ ಹಣಕಾಸಿನ ಸ್ಥಿತಿ ವ್ಯತ್ಯಾಸವಾಗಿರುತ್ತದೆ. ಆಗ ಯಾವ ಉದ್ದೇಶದಿಂದ ಸಮಿತಿಯನ್ನು ನೇಮಕ ಮಾಡುತ್ತೆವೆಯೋ ಆ ಉದ್ದೇಶ ಸಫಲವಾಗದಾರದು. ಈ ಕಾರಣದಿಂದ ಇಂತಹ ಒಂದು ಸಮಿತಿಯ ಅವಶ್ಯಕತೆಯಿಲ್ಲ. ಈ ಸಮಿತಿಯನ್ನು ಯಾವ ಉದ್ದೇಶದಿಂದ ಮಾಡಬೇಕೆಂದು ಸೂಚಿಸಿದ್ದಾರೋ ಅದೇ ಉದ್ದೇಶದಿಂದ ಎಸ್ಟಿಮೇಟ್ಸ್ ಸಮಿತಿ ಮುಂತಾದ ನಾನಾ ಸಮಿತಿಗಳು ಕೆಲಸ ಮಾಡುತ್ತವೆ. ಅಲ್ಲದೆ ಎಕಾನಮಿ ಆಫೀಸರಾಗಿದ್ದ ಶ್ರೀಮಾನ್ ರಾಘವೇಂದ್ರರಾಯರ ವರದಿಯ ಮೇಲೆ ಸರ್ಕಾರದವರು ಇನ್ನೂ ಅಂತ್ಯ ತೀರ್ಮಾನ ಮಾಡಿಲ್ಲ. ಹೀಗಿರುವಾಗ ಈ ನಿರ್ಣಯದಲ್ಲಿ ಸೂಚಿಸಿರುವ ಇನ್ನೊಂದು ಸಮಿತಿಯ ನೇಮಕದ ಅವಶ್ಯಕತೆಯಿಲ್ಲವೆಂದು ಹೇಳಿ ಈ ನಿರ್ಣಯವನ್ನು ವಿರೋಧಿಸುತ್ತೇನೆ.

Sri G. A. ACHARYA (Bangalore District—General).—Mr. Speaker, I am one of those who consider that at

present it is not necessary to appoint a committee of this kind. I divide the resolution tabled by Mr. Chandrasekharaiya into three parts—retrenchment expenditure and augmenting the resources of the State. It is true that to any Member of the Legislature looking at the expenditure of the State of Mysore last year and the same expenditure being continued even after the financial integration, it may appear necessary to appoint a committee of this kind. But let us see what are all the reports that we have before us. I am one of those, Mr. Speaker, who feel that there is no need to appoint any committee particularly in the face of the findings of the Economy Officer whose report is before this House. I have very carefully read that report page to page. And I feel that if only our Government were to act up to his recommendations or at least in future, prior to coming to any decisions on expenditure, were to keep this text book before them, I am quite sure that the object of the resolution will be well served and I am positively certain that it will be to the satisfaction of all the Members of this House.

The Hon'ble Sri H. C. DASAPPA.— How do you know that we are not keeping it before us ?

Sri G. A. ACHARYA.— It is only an impression. I am just pointing out that no committee with three or five members need be appointed, because Sir, as a student of economics, I have read the Report page to page and I am of opinion that in no document of any importance published by the Government for the last 25 years can you find such valuable information. The Economy Officer has searched and researched from Department to Department and from one industry to other and so forth. He has taken so much pains. In several instances, he has shown why a certain retrenchment should be done. He has put the question to himself and answered it. He has also apprised the Government of the present financial structure and of the coming events, of the unbalanced budgets and the expected deficits. Therefore I say Sir, I feel positively certain that Government will always keep before them this report and if they were to be guided by the recommendations made in that report, I am sure that will satisfy all the three parts of this resolution. namely, retrenchment, expenditure and augmenting the resources of the State.

As regards the third point namely the question of tapping new sources of revenue, I feel it requires a little vision and imagination. I believe that our Finance Minister has enough experience in tapping such resources which remain untapped up to now. It is not only here this difficulty is prevalent but every where. It is extremely difficult in these days to somehow carry on the administration whether you get the revenue or not and when you incur expenditure to an extent, you have got to find out new sources to that extent. On the one hand the people are demanding more and more comforts and on the other the revenues are falling. We are therefore placed in a very difficult situation. We must also find out ways and means of improving the resources of the State. That is of course a very important matter and I feel Sri B. S. Raghavendra Rao has dealt with this point also. Besides, Sir, I may straightaway state that there is already plenty of literature on the subject and there are several suggestions that have been already made in the Assembly on several occasions. In the face of all this, I once again say that at present it is not necessary to appoint a committee of the kind envisaged in the resolution.

Mr. SPEAKER.—The House will now rise for lunch and reassemble at 4-30 P.M.

The Assembly adjourned for lunch at Four of the Clock and reassembled at Thirty Minutes past Four of the Clock, Mr. Speaker (The Hon'ble Sri V. Venkatappa) in the Chair.

---

*ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗಾ ಜಿಲ್ಲೆ).— ಅಧ್ಯಕ್ಷರೇ, ಸ್ವಾಮಿ, ನನ್ನ ಸ್ನೇಹಿತರು ಮಾನ್ಯ ಸದಸ್ಯರಾದ ಶ್ರೀಮಾನ್ ಚಂದ್ರಶೇಖರಯ್ಯನವರು ಸಭೆಯ ಮುಂದೆ ಮಂಡಿಸಿರತಕ್ಕಂಥ ನಿರ್ಣಯಕ್ಕೆ ಬೆಂಬಲ ಕೊಡುತ್ತಾ ನಾನು ಹೇಳಬೇಕಾಗಿದೆ. ಈ ನಿರ್ಣಯದ ಮೇರೆ ಮಾತನಾಡತಕ್ಕಂಥ ಕೆಲವು ಮಾನ್ಯಸದಸ್ಯರುಗಳ ಭಾಷಣಗಳನ್ನು ಕೇಳಿ ನನಗೆ ಸಂತೋಷ, ಆಶ್ಚರ್ಯ ಮತ್ತು ವ್ಯಸನ ಈ ಮೂರೂ ಉಂಟಾಗಿದೆ.

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಸಂತೋಷ, ಆಶ್ಚರ್ಯ, ವ್ಯಸನ. . . . .

ಶ್ರೀ ಎಲ್. ಸಿದ್ದಪ್ಪನವರು.—ಹೌದು, ಸಂತೋಷವೂ ಉಂಟಾಯಿತು, ಆಶ್ಚರ್ಯವೂ ಉಂಟಾಯಿತು, ವ್ಯಸನವೂ ಉಂಟಾಯಿತು. ಸಂತೋಷ ಏಕೆಂದರೆ ಇಂಥಾದ್ದೇ ಒಂದು ನಿರ್ಣಯವನ್ನು ನಾನು 1949ನೇ ಇಸವಿ ಪ್ರಜಾಸ್ಥತಿನಿಧಿಸಭೆಯ ದಸರ ಅಧಿವೇಶನದಲ್ಲಿ ಕಳುಹಿಸಿಕೊಟ್ಟಿದ್ದೆ. ಆದರೆ ಆಗ ಅದು ಚರ್ಚೆಗೆ ಬರಲಿಲ್ಲ. ಪುನಃ 1950ನೇ ಇಸವಿ ಬಡ್ಜೆಟ್ ಅಧಿವೇಶನದಲ್ಲಿ ನನ್ನ ಸ್ನೇಹಿತರಾದ ಜನಾಬ್ ಇಮಾಂರವರು ಒಂದು ನಿರ್ಣಯವನ್ನು ಇದೇ ರೂಪದಲ್ಲಿ ಕಳುಹಿಸಿಕೊಟ್ಟಿದ್ದರು. ಅವರು ಆಗ ಸಭೆಯಲ್ಲಿ ಹಾಜರು ಇರಲಿಲ್ಲ. ಅವರ ಪರವಾಗಿ ಆ ನಿರ್ಣಯವನ್ನು ಸಭೆಯ ಮುಂದೆ ಇಟ್ಟು ಆ ನಿರ್ಣಯಕ್ಕೆ ಪುಷ್ಟೀಕರಿಸಿ ಮಾತನಾಡತಕ್ಕಂಥ ಒಂದು ಅವಕಾಶ ನನಗೆ ದೊರಕಿತ್ತು. ಆಗ ನಿರ್ಣಯದ ಮೇರೆ ಮಾತನಾಡಿದ ಕೆಲವು ಸದಸ್ಯರೂ ಕೂಡ ಈ ದಿನ ಭಾಷಣ ಮಾಡಿದ್ದಾರೆ. ಅವರಲ್ಲಿ ಮುಖ್ಯರಾದವರು ನನ್ನ ಸ್ನೇಹಿತರೂ, ನಮ್ಮ ಡಿಸ್ಟ್ರಿಕ್ಟ್‌ನವರೂ ಆದ ಶ್ರೀಮಾನ್ ಕಡಿದಾಳ್ ಮಂಜಪ್ಪನವರು. ಆಗ ಅವರು ಭಾಷಣ ಮಾಡಿ ಕೊನೆಯಲ್ಲಿ ಇಂಥಾ ಒಂದು ಸಮಿತಿ ಅನಾವಶ್ಯಕ ಎಂದು ಅಭಿಪ್ರಾಯಪಟ್ಟಿದ್ದರು. ಆದರೆ ಈಗ ಸುಮಾರು 9 ತಿಂಗಳಾದ ಮೇಲೆ ಅವರಿಗೆ ದೇವರು ಬುದ್ಧಿ ಕೊಟ್ಟು ವಿಷಯ ಪರಿಜ್ಞಾನ ಬಂದು ಈ ದಿನ ಶ್ರೀಮಾನ್ ಚಂದ್ರಶೇಖರಯ್ಯನವರು ಮಂಡಿಸಿರತಕ್ಕ ಈ ನಿರ್ಣಯಕ್ಕೆ ಅವರ ಪೂರ್ಣ ಬೆಂಬಲ ಕೊಟ್ಟಿದ್ದಾರೆ, ಇಂಥಾ ಒಂದು ಸಮಿತಿ ಅವಶ್ಯಕ ಎಂದು ಹೇಳಿದ್ದಾರೆ, ಹಿಂದೆ ಆ ರೀತಿಯು ಒಂದು ನಿಲುವನ್ನು ತೆಗೆದುಕೊಂಡಿದ್ದಿದ್ದು ಮಹಾಶಯರಿಗೆ ಈಗ ಜ್ಞಾನೋದಯವಾಗಿ ವಿಷಯ ಪರಿಚಯವಾಯಿತಲ್ಲಾ ಎಂದು ಸಂತೋಷವಾಯಿತು. ಕೆಲವು ಮಹಾಶಯರು ಅವರ ಭಾಷಣದಲ್ಲಿ, ಹೌದು ನಮ್ಮ ಹಣಕಾಸಿನ ಪರಿಸ್ಥಿತಿ ಸಮರ್ಪಕವಾಗಿಲ್ಲ ಎಂದು ಹೇಳಲು ಧೈರ್ಯ ಮಾಡುವುದಿಲ್ಲ. ಪುನಃ ಅವರೇ ಎರಡು ಮಾತುಗಳನ್ನಾಡಿದ ಮೇಲೆ ನಮ್ಮ ಹಣಕಾಸಿನ ಸ್ಥಿತಿ ಬಹಳ ಕಷ್ಟ ಪರಿಸ್ಥಿತಿಯಲ್ಲಿದೆ ಎಂದು ಹೇಳಿದರು. ಇದನ್ನು ನೋಡಿ ಆಶ್ಚರ್ಯವಾಯಿತು. ವಾಸ್ತವಾಂಶ ಏನಿದೆ ಎಂಬುದನ್ನು ನೋಡಿ ತಿಳಿದುಕೊಂಡು ಒಂದು ದೃಢವಾದ್ದ ನಿರ್ಧಾರಕ್ಕೆ ಬರಲು ಅವರ ಮನಸ್ಸಿನಲ್ಲಿ ಸಂದೇಹ ಇರುವ ಹಾಗೆ ಕಾಣುತ್ತದೆ. ಇದಕ್ಕೇ ಆಶ್ಚರ್ಯ. ಇನ್ನು ಕೆಲವು ಮಹಾಶಯರು ಇದ್ದಾರೆ. ಅವರಿಗೆ ಇನ್ನೂ ಜ್ಞಾನೋದಯವಾಗಲಿಲ್ಲವಲ್ಲಾ, ಶ್ರೀಮಾನ್ ಚಂದ್ರಶೇಖರಯ್ಯನವರು ಮಂಡಿಸಿರತಕ್ಕ ಈ ಅಮೂಲ್ಯವಾದ ನಿರ್ಣಯವನ್ನು ಅವರು ವಿರೋಧಿಸಿದ್ದಾರಲ್ಲಾ ಎಂದು ವ್ಯಸನವಾಗಿದೆ. ಸ್ವಾಮಿ, ನಾನು ಮೊದಲೇ ಹೇಳಿದ ಹಾಗೆ 1950ನೇ ಇಸವಿ ಬಡ್ಜೆಟ್ ಅಧಿವೇಶನದಲ್ಲಿ ನಾನು ಇಂಥಾದ್ದೇ ಒಂದು ನಿರ್ಣಯವನ್ನು ಸಭೆಯ ಮುಂದೆ ಎಂತಿಸಿದಾಗ ಸರ್ಕಾರದ ಪರವಾಗಿ ಸರ್ಕಾರದ ಮುಖ್ಯ ಮಂತ್ರಿಗಳು ಹಾಗೂ ಕೊಟ್ಟರು. ನಿರ್ಣಯವನ್ನೇನೋ ಅವರು ವಿರೋಧಿಸಿದರು. ಏರೋ ದಿಸಿದ ಕಾಲದಲ್ಲೂ ಕೂಡ ಸರ್ಕಾರದ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಪಡಿಸುವ ಅವಶ್ಯಕತೆ ಇಲ್ಲ ಎಂದು ಹೇಳಲಿಲ್ಲ ಅಥವಾ ಖರ್ಚುಬಾಬನ್ನು ಕಡಮೆ ಮಾಡಿಕೊಳ್ಳಬೇಕಾದ ಅವಶ್ಯಕತೆ ಇಲ್ಲ ಎಂದು ಹೇಳಲಿಲ್ಲ. ಆದರೆ ಇಂಥಾ ಒಂದು ಸಮಿತಿಯನ್ನು ನೇಮಕ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ, ಸರ್ಕಾರದ ಮುಂದೆ ಶ್ರೀಮಾನ್ ಬಿ. ಎಸ್ ರಾಘವೇಂದ್ರರಾಯರ ವರದಿ ಇದೆ, ಆ ವರದಿ ಮೇಲೆ ಕಾರ್ಯಕ್ರಮ ತೆಗೆದು ಕೊಳ್ಳುತ್ತೇವೆ ಎಂಬ ಭರವಸೆ ಕೊಟ್ಟು ಇಂಥಾ ಒಂದು ಸಮಿತಿ ಅನಾವಶ್ಯಕ ಎಂದು ಅಭಿಪ್ರಾಯಪಟ್ಟರು. ಪ್ರಾಯಶಃ ಈ ದಿನ ಈ ನಿರ್ಣಯದ ವಿಷಯದಲ್ಲಿ ಆಗಿರತಕ್ಕ ಚರ್ಚೆಗೆ ಉತ್ತರ ಕೊಡುವಾಗ ಸರ್ಕಾರದ ಪರವಾಗಿ ಮುಖ್ಯ ಮಂತ್ರಿಗಳು ಕೊಡುತ್ತಾರೋ, ಹಣಕಾಸಿನ ಸಚಿವರು ಕೊಡುತ್ತಾರೋ ಗೊತ್ತಿಲ್ಲ. ಯಾರೇ ಕೊಡಲಿ ಅವರಿಗೆ ಇನ್ನೂ ಒಂದು ಬೆಂಬಲ ಸಿಕ್ಕಬಹುದು ಎಂದು ಕಾಣುತ್ತದೆ. ಏಕೆಂದರೆ ಇನ್ನೂ ಒಬ್ಬಬ್ಬ ಮಹಾಶಯರು ಸೂಚನೆ ಕೊಟ್ಟಿದ್ದಾರೆ. ಅದೇನೆಂದರೆ ಶ್ರೀಮಾನ್ ಬಿ. ಎಸ್. ರಾಘವೇಂದ್ರರಾಯರ ವರದಿಯ ಜೊತೆಗೆ ಸರ್ಕಾರದವರು ನನ್ನೆ ತಾನೆ ಎಸ್ಟಿಮೇಟ್ಸ್ ಸಮಿತಿ ಎಂಬುದಾಗಿ ಒಂದು ಸಮಿತಿಯನ್ನು ನೇಮಕ ಮಾಡಿದ್ದಾರೆ. ಆ ಸಮಿತಿ ಈ ವಿಷಯಗಳನ್ನೆಲ್ಲಾ ಪರ್ಯಾಲೋಚನೆ ಮಾಡಿ ಸರ್ಕಾರದವರಿಗೆ ಸಲಹೆ ಕೊಡಲು ಅವಕಾಶವಿದೆ. ಆದ್ದರಿಂದ ಆ ಕಾರಣ ದಿಂದಲೂ ಕೂಡ ಇಂಥಾ ಒಂದು ಸಮಿತಿ ಅನಾವಶ್ಯಕ ಎಂದು ಹೇಳಬಹುದು.

ಸ್ವಾಮಿ, ನಾನು ಇದೇ ತರದ ಒಂದು ನಿರ್ಣಯವನ್ನು ಹಿಂದೆಯೇ ಸೂಚಿಸಿದ್ದೆ. ಆಗಲೂ ಕೂಡ ನಾನು ನಿರ್ಣಯದ ಮೇರೆ ಮಾತನಾಡಿದಾಗ ಶ್ರೀ ಬಿ. ಎಸ್. ರಾಘವೇಂದ್ರರಾಯರ ವರದಿಯು ನನ್ನಷ್ಟಕ್ಕೆ ನನ್ನಲ್ಲಿತ್ತು. ಅವರೂ ಒಬ್ಬ ಅನುಭವಸ್ಥರಾದ ಅಧಿಕಾರರಾಗಿ ಸರ್ಕಾರದ ಅನೇಕ ಇರಾಖೆಗಳಲ್ಲಿ ಕೆಲಸ ಮಾಡಿ ತಮ್ಮ ಅನುಭವದ ಮೂಲಕ ಯಾವ ಯಾವ ಬಾಬಿನಲ್ಲಿ ಖರ್ಚನ್ನು ಕಡಿಮೆ ಮಾಡಬಹುದು, ಯಾವ ಬಾಬುಗಳಿಂದ ಉತ್ಪತ್ತಿ ಹೆಚ್ಚು ಮಾಡಬಹುದೆಂದು ಸಲಹೆ ಕೊಟ್ಟಾಗ್ಯೂ ಈ ವಿಷಯದಲ್ಲಿ ನಾನು ಹೇಳಿದಂತೆ ಒಂದು ಸ್ವತಂತ್ರವಾದ ಖಾಸಗಿ ಮಹನೀಯರ ಸಮಿತಿಯ ಸಲಹೆಗಳನ್ನು ತೆಗೆದುಕೊಳ್ಳುವುದು ಸೂಕ್ತವೆಂದು ಹೇಳುತ್ತೇನೆ. ಇಂಡಿಯಾದೇಶದಲ್ಲಿ ಬೇರೆ ಬೇರೆ ಅನೇಕ ಪ್ರಾಂತ್ಯಗಳಲ್ಲಿ ಇದೇ ರೀತಿಯ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ. ನಮ್ಮ ನೆರೆ ಪ್ರಾಂತ್ಯವಾದ ಮದ್ರಾಸ್ ಸರ್ಕಾರದವರು ಸರ್ ರಾಮಲಿಂಗಂಚೆಟ್ಟಿಯಾರ್ ಎಂಬ ಖಾಸಗೀ ಮಹನೀಯರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಏರ್ಪಡಿಸಿದ್ದಾರೆ. ಈ ರೀತಿ ಒಂದು ಸ್ವತಂತ್ರ ಮನೋವೃತ್ತಿಯುಳ್ಳ ಕೈಗಾರಿಕೋದ್ಯಮಿಗಳಾದರೆ ಅವರಿಗೆ ಇತ್ತ ಅಧಿಕಾರಗಳ ದೃಷ್ಟಿಯೂ ಮನಸ್ಸಿನಲ್ಲಿರುತ್ತದೆ, ಅತ್ತ ಸಾರ್ವಜನಿಕರ ದೃಷ್ಟಿಯೂ ಮನಸ್ಸಿನಲ್ಲಿರುತ್ತದೆ. ಕೈಗಿಮ್ಮಾ ಅವರ ಸಲಹೆಗಳು ಒಹಳ ಅಮೂಲ್ಯವಾಗಿರುತ್ತವೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಇದೇ ರೀತಿಯಲ್ಲಿ ಕೇಂದ್ರ ಸರ್ಕಾರದವರೂ ಕಸ್ತೂರಿ ಬಾಯಿ ಲಾಲಾಭಾಯ್ ಎಂಬ ಒಬ್ಬ ಉತ್ತಮ ಕೈಗಾರಿಕೋದ್ಯಮಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದರು. ಅವರಿಂದ ಬಂದ ಸಲಹೆಗಳಾಗಲೇ ಕಾರ್ಯರೂಪಕ್ಕೆ ತರಲಾಗಿದೆ; ಅವರ ಅನೇಕ ಶಿಫಾರಸುಗಳ ಮೇಲೆ ಕಾರ್ಯಕ್ರಮಗಳನ್ನು ಕೈಕೊಂಡಿದ್ದಾರೆ. ಅದೇ ರೀತಿಯಲ್ಲಿ ನಾವೂ ಸಹ ಹಣಕಾಸಿನ ವ್ಯವಹಾರ

* Speech not revised by the Member.

ಳನ್ನು ಚೆನ್ನಾಗಿ ತಿಳಿದುಕೊಂಡಿರುವ ಮತ್ತು ಸರ್ಕಾರದ ವರಿಗೆ ತಕ್ಕ ಸಲಹೆಗಳನ್ನು ಕೊಡುವ ಶಕ್ತಿಯುಳ್ಳ ಒಬ್ಬ ಖಾಸಗಿ ಮಹನೀಯರನ್ನು ನೇಮಕ ಮಾಡಿ ಅವರ ಅಭಿ ಪ್ರಾಯವನ್ನು ಪಡೆಯುವುದು ಯುಕ್ತವೆಂದು ನಾನು ಹಿಂದೆಯೇ ಹೇಳಿದ್ದೇನೆ. ನಾನು ಮೊದಲೇ ಹೇಳಿದ ಹಾಗೆ ಈ ನಿರ್ಣಯದ ಮೇರೆ ಬಂದಿರತಕ್ಕ ಚರ್ಚೆಗಳನ್ನು ನೋಡಿದರೆ ಅದರಲ್ಲೂ ಕೆಲವು ಮಹಾಶಯರು ವಹಿಸಿರುವ ನಿಲುವನ್ನು ನೋಡಿದರೆ ನನಗೊಂದು ಸನ್ನಿವೇಶದ ಗಾದೆ ಜ್ಞಾಪಕಕ್ಕೆ ಬರುತ್ತದೆ. ಅತ್ತೆ ಸೊಸೆ ಇಬ್ಬರು ಒಂದು ಮನೆಯಲ್ಲಿದ್ದರಂತೆ, ಅತ್ತೆ ಮನೆಯಲ್ಲಲ್ಲಿದ್ದಾಗ ಒಬ್ಬ ಭಿಕ್ಷುಕ ಮನೆಗೆ ಬಂದ, 'ಭಿಕ್ಷೆಗೇನೂ ಮನೆಯಲ್ಲಲ್ಲ, ಹೊರಟು ಹೋಗು' ಎಂದು ಸೊಸೆ ಹೇಳಿಕಳುಹಿಸಿದಳು. ಭಿಕ್ಷುಕ ಹೊರಟುಹೊಗುತ್ತಿರುವಷ್ಟರಲ್ಲಿ ಅತ್ತೆ ಮನೆಗೆ ಬಂದು ಭಿಕ್ಷುಕನನ್ನು ಕೇಳಿದ್ದಕ್ಕೆ ಅವನು ಸೊಸೆ ಕೊಡುವುದಿಲ್ಲವೆಂದು ಹೇಳಿದ ಸಮಾಚಾರವನ್ನು ತಿಳಿಸಿದನು. ಆದನ್ನು ಕೇಳಿ ಅತ್ತೆ, ಭಿಕ್ಷುಕನನ್ನು ಮತ್ತೆ ಮನೆಗೆ ಕರೆದು ಭಿಕ್ಷೆಯಿಲ್ಲವೆಂದು ಹೇಳಿ ಕಳುಹಿಸುವುದಕ್ಕೆ ಸೊಸೆಯಲ್ಲಿ ಅಧಿಕಾರವಿದೆ! ಮನೆಯ ಯಜಮಾನಿ, ನಾನು ಈಗ ಹೇಳುತ್ತೇನೆ 'ಭಿಕ್ಷೆಯಿಲ್ಲ' ಎಂದಕ್ಕೆ ಹೋಗು ಎಂದು' ಎಂದು ಹೇಳಿಕಳುಹಿಸಿದಳು. ಈಗ ಇದರ ಮೇರೆ ನಡೆದಿರುವ ಚರ್ಚೆಯೂ ಇದೇ ರೀತಿ ಇದೆ. ನಾನು ನಿರ್ಣಯವನ್ನು ತಂದಾಗ್ಗೆ ಅದನ್ನು ಪುಷ್ಟೀಕರಿಸುವ ಒಬ್ಬ ಸದಸ್ಯರೂ ಸಹ ಸಿಕ್ಕಲಿಲ್ಲ. ಅಂತಾದ್ದನ್ನೇ ಅವರ ಪಕ್ಷದವರಾದ ಶ್ರೀಮಾನ್ ಚಂದ್ರಶೇಖರಯ್ಯನವರು ತಂದಾಗ್ಗೆ ಅದಕ್ಕೆ ಪುಷ್ಟೀಕರಿಸುವವರಾದರೂ ಇದ್ದಾರಲ್ಲಾ ಎಂದು ನನಗೆ ಸಂತೋಷವಾಗಿದೆ. ಹಿಂದೆ ನನ್ನ ಸಲಹೆಯನ್ನು ಅಂಗೀಕರಿಸುವುದಕ್ಕಾಗುವುದಿಲ್ಲ ವೆಂದು ಹೇಳಿದವರು ಈಗ ಅದೇ ಸಲಹೆಗಳನ್ನೇ ಚೆನ್ನಾಗಿದೆಯೆಂದು ಹೇಳುವ ಮನೋಭಾವ ಬಂತಲ್ಲಾ! ಸಂತೋಷ. ಅಲ್ಲದೆ, ಇದೇನೇ ಇರಲಿ, ಈಗಲೂ ಶ್ರೀಮಾನ್ ಎಂ. ಗೋವಿಂದರೆಡ್ಡಿಯಂಥವರು ಈ ಸಭೆಯಲ್ಲಿದ್ದಾರಲ್ಲಾ! ನಮ್ಮ ಹಣಕಾಸಿನ ಸ್ಥಿತಿ ಚೆನ್ನಾಗಿದೆಯೆಂಬ ಭಾವನೆಯಲ್ಲಿಯೇ ಇನ್ನೂ ಇದ್ದಾರಲ್ಲಾ!

Sri M. GOVINDA REDDY.—I am sorry, he is misquoting. I did not say it. I said there is strain on financial resources and it is indisputable that there is also need for retrenchment. Even now I hold that view.

Sri L. SIDDAPPA.—I am sorry if I have misrepresented the Hon'ble Member.

ಅಂತೂ ನಮ್ಮ ಹಣಕಾಸಿನ ಸ್ಥಿತಿ ಸಮರ್ಪಕವಾಗಿಲ್ಲ ಎಂಬುದನ್ನು ನಾನು ಸರ್ಕಾರದ ಮಾನ್ಯ ಸಚಿವರ ಅನೇಕ ಭಾಷಣಗಳಲ್ಲಿಯೂ ಮತ್ತು ಮಾನ್ಯ ಸದಸ್ಯರು ಕೇಳಿರತಕ್ಕ ಪ್ರಶ್ನೆಗಳಿಗೆ ಕೊಟ್ಟಿರತಕ್ಕ ಉತ್ತರಗಳಲ್ಲಿಯೂ ಎಷ್ಟು ಬೇಕಾದರೂ ಉದಾಹರಿಸಿ ಕೊಡಬಲ್ಲೆ. ಮಾನ್ಯ ಹಣಕಾಸಿನ ಸಚಿವರು 1950 ನೆಯ ಸಾಲನಲ್ಲಿ ಮಾಡಿತಂತಕ್ಕ ಭಾಷಣವ ಪ್ರತಿಯನ್ನು ನೋಡುವುದಾದರೆ, ಅವರು ಎಷ್ಟೋ ಕಡೆ ಹೇಳಿದ್ದಾರೆ, ಇ ಥಿಂಥಾ ಯೋಜನೆಗಳನ್ನಿಟ್ಟುಕೊಂಡಿದ್ದೇವೆ, ನಮ್ಮ ಹಣಕಾಸಿನ ಸ್ಥಿತಿ ಉತ್ತಮವಾಗಿ ಆದೋದನೆಗಳಿಗೆ ಮಂಜೂರಾತಿ ಕೊಡತ್ತೇವೆಂದು ಹೇಳಿದ್ದಾರೆ. ನಿನ್ನೆ ದಿವಸ ಶ್ರೀಮಾನ್ ಟಿ. ಸುಬ್ರಹ್ಮಣ್ಯರವರು ಕೇಳಿದ ಒಂದು ಪ್ರಶ್ನೆಗೆ ಉತ್ತರ ಕೊಟ್ಟಿರುವುದರಲ್ಲೂ ಇದನ್ನು ಹೇಳಿದ್ದಾರೆ. ಎಷ್ಟೋ ಕಟ್ಟಡಗಳನ್ನು—ಅವೂ ದೊಡ್ಡ ದೊಡ್ಡ ಕಟ್ಟಡಗಳನ್ನೆಲ್ಲಾ—ಗ್ರಾಮಾಂತರಗಳಲ್ಲಿ ಪ್ರೈಮರಿ ಸ್ಕೂಲು ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಹಣವಿಲ್ಲದೆ ನಿಲ್ಲಿಸಿದ್ದೇವೆಂದು ಸರ್ಕಾರದ ಪರವಾಗಿ ಉತ್ತರ ಬಂತು. ಇನ್ನು ಇಂಥಾ ಅನೇಕ ಪ್ರಶ್ನೆಗಳನ್ನು ಈ ಅಧಿವೇಶನದಲ್ಲೂ ಮಾನ್ಯ ಸದಸ್ಯರು ಕೇಳಿದ್ದಾರೆ. ಮಾನ್ಯ ಸ್ನೇಹಿತರಾದ ಶ್ರೀಮಾನ್ ಗಂಗಾನಾಯಕರು ಉಪಪ್ರಶ್ನೆ ಹಾಕುತ್ತಾ, ಯಾವುದೋ ಒಂದು ರಸ್ತೆಯನ್ನು ಏಕೆ ಮುಂದಾವರಿಸಲಲ್ಲವೆಂದು ಕೇಳಿದ್ದಕ್ಕೆ ಹಣವಿಲ್ಲದೆ ಸಾಧ್ಯವಾಗಲಲ್ಲವೆಂದು ಹೇಳಿದ್ದಾರೆ. ಹೀಗೆ ಇಂಥ ಸಣ್ಣ ಸಣ್ಣ ವಿಷಯಗಳಲ್ಲಿಯೂ ತಮ್ಮ ಹಣದ ಕೊರತೆಯನ್ನು ಮುಂದಿಡುತ್ತಿದ್ದಾರೆ. ಆದ್ದರಿಂದ ಈ ರೀತಿಯಾಗಿ ಎಷ್ಟೋ ನಿದರ್ಶನಗಳೂ, ಉದಾಹರಣೆಗಳೂ ಇರುವಾಗ ಅವನ್ನು ಮರೆಮಾಚಿ ಯಾವುದೋ ಒಂದು ವರ್ಷದ ಯಾವುದೋ ಒಂದು ರೀತಿನೀತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ನಮ್ಮ ಹಣಕಾಸಿನ ಪರಿಸ್ಥಿತಿ ಚೆನ್ನಾಗಿದೆಯೆಂದು ವಾದಿಸುವುದರಿಂದೇನೂ ಪ್ರಯೋಜನವಿಲ್ಲ.

ನಾನಿನ್ನು ಹೆಚ್ಚಿಗೆ ವಿಷಯಕ್ಕೆ ಹೋಗುವುದಿಲ್ಲ. ಏಕೆಂದರೆ ಮಾನ್ಯ ಸ್ನೇಹಿತರಾದ ಜನಾಬ್ ಇವಾಂ ರವರು ಹೇಳಿದಹಾಗೆ ಈ ನಿರ್ಣಯವನ್ನು ಮಂಡಿಸಿರುವ ಶ್ರೀಮಾನ್ ಚಂದ್ರಶೇಖರಯ್ಯನವರೇ ಸ್ಪಷ್ಟವಾಗಿ ಎಲ್ಲವನ್ನೂ ಹೇಳಿದ್ದಾರೆ. ಮುಖ್ಯವಾಗಿ ಖರ್ಚನ್ನು ಕಡಿಮೆ ಮಾಡಬೇಕಾದ್ದು ಅವಶ್ಯಕತೆ; ಆದಾಯವನ್ನು ಹೆಚ್ಚುಮಾಡಿಕೊಳ್ಳುವುದು ಅಗತ್ಯ. ಸರ್ಕಾರದವರೇನೋ ಇಂಥಾ ಒಂದು ಸಮಿತಿ ಅನಾವಶ್ಯಕವೆಂದು ವಾದಮಾಡಬಹುದು. ಬಿ. ಎಸ್. ರಾಘವೇಂದ್ರ ರಾಯರ ವರದಿಯೇ ಸರ್ಕಾರದ ಮುಂದಿದೆ, ಅದರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆ, ಅವರ ಸಲಹೆಗಳ ಮೇರೆ ಸುಮಾರು 23ಲಕ್ಷ ರೂಪಾಯಿಗಳನ್ನು ಉಳಿತಾಯಮಾಡಿದ್ದೇವೆ; ಇದರಮೇಲೂ ಸಲಹೆಗಳ ನ್ನೇನಾದರೂ ಕೊಡಬೇಕಾದಿದ್ದರೆ ಎಸ್ಟಿಮೇಟ್ಸ್ ಸಮಿತಿಯವರು ಕೊಡಬಹುದು ಎಂದು ಹೇಳಬಹುದು. ಆದರೆ ನಾನು ಹೇಳುವುದರ ಉದ್ದೇಶವಿಷ್ಟೆ: ಈಗೇ ನಿದ್ದರೂ ಒಂದು Stop gap arrangement ನ ಮೇರೆ ನಾವು ಕೆಲಸಮಾಡುತ್ತಿದ್ದೇವೆ. ಈ ಕಾಲ ಮುಗಿದಮೇರೆ, ಅಂದರೆ ಇನ್ನೈದು ವರ್ಷಗಳಾದ ಮೇರೆ ನಮ್ಮ ಹಣಕಾಸಿನ ಸ್ಥಿತಿ ಏನಾಗುತ್ತದೆಂಬುದನ್ನು ನೋಡಬೇಕು. ಫೈನಾನ್ಷಿಯರ್ ಇಂಟ್ರೆಗೇಷ್ ಆಗಿ ಬರುವ 5 ವರ್ಷಗಳ ನಂತರ ಶೇಕಡಾವಾರು ಎಷ್ಟೆಷ್ಟೋ ಎಂದು ವರಮಾನ ಕಡಿಮೆಮಾಡಿ, ಅದಾದ ನಂತರ ನಮ್ಮ ಎಲ್ಲಾ ಖರ್ಚಿನ ಬೊಬಲಗನ್ನು ನಾವೇ ಸರಿಪಾಡಿಕೊಳ್ಳಬೇಕಾಗುತ್ತದೆ. ಅದನ್ನು ಮಾಡಿಕೊಳ್ಳಬೇಕಾದರೆ ಈಗೇನಾದರೂ ಸಲಹೆ ಕೊಟ್ಟಿದ್ದಾರೆಯೇ? ಸರ್ಕಾರದವರು ಈಗ ತಮ್ಮಮುಂದಿಟ್ಟುಕೊಂಡಿರುವ ಸಲಹೆಗಳೂ ಸಾಲದು. ಅಲ್ಲದೆ ಸರ್ಕಾರದವರು ಯಾರಾದರೂ ಈ ಬಾಬಿನಲ್ಲಿ ತಜ್ಞರಾಗಿರುವರ ಸಲಹೆಗಳನ್ನು ತೆಗೆದುಕೊಳ್ಳುವುದು ಅವಶ್ಯಕ. ಮಾನ್ಯ ಸ್ನೇಹಿತರಾದ ಕಡಿದಾಳ್ ಮಂಜಪ್ಪನವರು ರೋಡ್ ಟ್ರಾನ್ಸ್‌ಪೋರ್ಟ್‌ಗೆ ರೈಸ್ಮಿನ್ಸ್ ಕೊಡುವುದರಲ್ಲಿ ಒಂದೊಂದು ರೈಸಿಗೂ 5,000 ರೂಪಾಯಿಗಳ 'ಫೀ' ತೆಗೆದುಕೊಳ್ಳಬಹುದೆಂದು ಸೂಚಿಸಿದರು. ಹಾಗೆಯೇ ಹೋಟಲುಗಳು, ಸಿನಿಮಾ ಥಿಯೆಟರ್‌ಗಳನ್ನು ತೆಗೆಯುವುದಕ್ಕೆ ರೈಸೆನ್ಸ್ ಕೊಡುವುದಕ್ಕೂ ಫೀ ವಿಧಿಸಬಹುದೆಂದು ಹೇಳಿದರು. ಹಾಗೆ ಅವರು ಹೇಳಿದಾಕ್ಷಣ ನಾವು ಆ ರೀತಿ ವಿಧಿಸಬಹುದೆಂದು ಭಾವಿಸಲಾಗದು. ಮಟ್ಟಿಕ್ ಫೈನಾನ್ಸಿನ ಶಾಸ್ತ್ರಜ್ಞನೆನಿಸಿಯೋ ಅದರ

(SRI L. SIDDAPPA,)

ತತ್ಪಕ್ಕನುಸಾರವಾಗಿ ಇಂಥವುಗಳಮೇಲೆ ತೆರಿಗೆ ಹಾಕುವುದು ಸರಿಯೇ ಅಲ್ಲವೇ ಎಂಬುದನ್ನು ಹೇಳಬಲ್ಲ ಚೈತನ್ಯವಿರುವ ನಿಪುಣರ ಸಲಹೆಗಳನ್ನು ಕೇಳುವುದು ಸೂಕ್ತ. ಈ ದೃಷ್ಟಿಯಿಂದ ನಾನು ಈಗ ನಭೆಯ ಮುಂದಿರತಕ್ಕ ಶ್ರೀಮಾನ್ ಚಿಂದ್ರಶೇಖರಯ್ಯನವರ ನಿರ್ಣಯಕ್ಕೆ ಪೂರ್ಣ ಬೆಂಬಲ ಕೊಡುತ್ತೇನೆ.

Sri M. MADIAH (Mysore District Depressed class).—I move for closure.

Mr. SPEAKER.—The question is :

"That the question be now put."

The motion was adopted

ಶ್ರೀ ಡಿ. ಎಚ್. ಚಿಂದ್ರಶೇಖರಯ್ಯನವರು.—ಮಾನ್ಯ ಅಧ್ಯಕ್ಷರೇ, ಈಗ ನಾನಾ ನಭೆಯುಮಂದೆ ತಂದಿರತಕ್ಕ ನಿರ್ಣಯದ ಉದ್ದೇಶ ಸಾಧುವಾದುದೆಂದೇ ಎಲ್ಲ ಸದಸ್ಯರೂ ಒಪ್ಪಿಕೊಂಡಿದ್ದಾರೆ. ಇದರಲ್ಲಿ ಕೆಲವರು, ನಾನು ಸೂಚಿಸಿರುವಂತೆ ಒಂದು ಆ ಸಮಿತಿಯನ್ನು ಏರ್ಪಡಿಸಿ ಆ ಮೂಲಕ ನಮ್ಮ ಸಂಸ್ಥಾನದ ಹಣಕಾಸಿನ ಪರಿಸ್ಥಿತಿಯನ್ನು ಪರಿಶೀಲನೆ ಮಾಡಿಸಿ ಅವರಿಂದ ಸಲಹೆಗಳನ್ನು ಪಡೆದು ನಮ್ಮ ಹಣಕಾಸಿನ ಬಿಕ್ಕಟ್ಟನ್ನು ಬಗೆಹರಿಸಿಕೊಳ್ಳುವುದು ಅನುಕೂಲವೆಂದು ನನ್ನ ಸೂಚನೆಯನ್ನು ಸಮರ್ಥಿಸಿದ್ದಾರೆ. ಅದಕ್ಕಾಗಿ ನಾನು ಅವರೆಲ್ಲರಿಗೂ ವಂದನೆಗಳನ್ನರ್ಪಿಸುವುದು ನನ್ನ ಮೊದಲನೆಯ ಕರ್ತವ್ಯವಾಗಿದೆ. ಈ ನಿರ್ಣಯವನ್ನು ವಿರೋಧಿಸಿದವರೂ ಒಂದು ರೀತಿಯಲ್ಲಿ ನನ್ನ ವಂದನೆಗೆ ಅರ್ಹರೆಂದು ಭಾವಿಸುತ್ತೇನೆ. ಅವರಾದರೂ ಸಹ ನಮ್ಮ ಹಣಕಾಸಿನ ಪರಿಸ್ಥಿತಿ ಸರಿಯಾಗಿಲ್ಲವೆಂಬ ಅಂಶವನ್ನು ಕೂಲಂಕಷವಾಗಿ ವಿವರಿಸಿ ಹೇಳಿರುತ್ತಾರೆ. ಆದರೆ ಈ ಬಗ್ಗೆ ನಡೆಸತಕ್ಕ ಕಾರ್ಯವನ್ನು ಯಾವ ರೀತಿ ಯಾವ ವಿಜನ್ನು ಮುಖಾಂತರ ಮಾಡಬೇಕು ಎಂಬುದರಲ್ಲಿ ಮಾತ್ರ ತಮ್ಮ ವಿರೋಧಾಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅವರು ಹೇಳುವುದೇನೆಂದರೆ—ಎಕಾನಮಿ ಆಫೀಸರ ಮಾದಿ ಸರ್ಕಾರದವರ ಹನ್ನಗತವಾಗಿದೆ. ಆ ಮಾದಿಯಲ್ಲಿ ಎಲ್ಲಾ ವಿಚಾರಗಳೂ ಚೆನ್ನಾಗಿ ಪರಿಶೀಲನೆಯಾಗಿ ಆದೀಗ ಸರ್ಕಾರದವರ ಮುಂದಿದೆ. ಈಗ ಉಳಿದಿರತಕ್ಕದ್ದು ಸರ್ಕಾರದವರು ಆ ವರದಿಯನ್ನು ಅಂಗೀಕರಿಸಿ ಒಂದು ಹುಕುಂ ಹೊರಡಿಸತಕ್ಕದ್ದು ಮಾತ್ರ ಎಂಬುದಾಗಿ ಹೇಳಿದ್ದಾರೆ. ಈ ಸಂಬಂಧವಾಗಿ ನಾನು ಹೇಳುವುದೇನೆಂದರೆ—ಈ ವರದಿ ಸರ್ಕಾರದವರ ಕೈ ಸೇರಿ ಒಂದು ವರ್ಷಕ್ಕೆ ಮೇಲಾಯಿತು. ಆದರೆ ಇದನ್ನು ಅವರು ಈ ವರೆಗೂ ಸಂಪೂರ್ಣವಾಗಿ ಒಪ್ಪಿದಂತೆ ಕಾಣುವುದಿಲ್ಲ. ಅಷ್ಟೇ ಅಲ್ಲದೆ ಈ ವರದಿ ಅವರಿಗೆ ತಲುಪಿದ ತರುವಾಯ ಅವರು ತಯಾರಿಸಿ ನಮ್ಮ ಮುಂದಿಟ್ಟಿದ್ದ ಆಯವ್ಯಯ ಪಟ್ಟಗಳಲ್ಲಿಯೂ ಕೂಡ ಶ್ರೀ ಬಿ. ಎಸ್. ರಾಘವೇಂದ್ರರಾಯರ ಶಿಫಾರಸುಗಳನ್ನು ಜಾರಿಗೆ ತಂದಂತೆ ವ್ಯಕ್ತಪಡುವುದಿಲ್ಲ. ಆ ವರದಿ ಬಂದಮೇಲೆ 1949—50 ಮತ್ತು 0—51 ಈ ಎರಡು ವರ್ಷಗಳ ಆಯವ್ಯಯ ಪಟ್ಟಿಯನ್ನು ಸರ್ಕಾರದವರು ತಯಾರುಮಾಡಿದ್ದಾರೆ. ಈ ಎರಡು ಪಟ್ಟಿಗಳಲ್ಲಿಯೂ, ಶ್ರೀ ಬಿ. ಎಸ್. ರಾಘವೇಂದ್ರರಾಯರ ವರದಿಯಲ್ಲಿ ಸೂಚಿಸಿರಾದಂಥ ಒಂದೆರಡು ಸಲಕೆಗಳನ್ನಾದರೂ ಇವರು ಜಾರಿಗೆ ತಂದಿದ್ದಾರೆಂಬುದು ಸಂದೇಹಾಸ್ಪದವಾಗಿದೆ. ಈ ಸಾರ್ವತ್ರಿಕ ಕೇಳಿರುವ ಪ್ರಶ್ನೆಗೆ ಕೊಟ್ಟಿರುವ ಉತ್ತರದ ಪ್ರಕಾರ 21 ಲಕ್ಷ ರೂಪಾಯಿಗಳನ್ನು ಸರ್ಕಾರದ ಖರ್ಚಿನಲ್ಲಿ ಕಮ್ಮಿ ಮಾಡಿರುವುದಾಗಿ ಹೇಳಿದ್ದಾರೆ. ಆದರೆ ಯಾವ ಯಾವ ಬಾಬುಗೋ ಹೆಚ್ಚು ಹಣವನ್ನು ಖರ್ಚುಮಾಡುತ್ತಿರುವುದಾಗಿಯೂ ಗೊತ್ತಾಗಿದೆ. ಈ ವಿಚಾರಗಳನ್ನೆಲ್ಲಾ ಗಮನಿಸಿದರೆ ಸರ್ಕಾರದವರು ಆ ಎಕಾನಮಿ ವರದಿಯನ್ನು ಈ ವರೆಗೆ ಅಂಗೀಕಾರಮಾಡಿದ್ದಾರೆ ಎಂಬುದಕ್ಕಾಗಲೀ ಅಥವಾ ಅದನ್ನು ಜಾರಿಗೆ ತಂದಿದ್ದಾರೆಂದು ಹೇಳುವುದಕ್ಕಾಗಲೀ ಎಲ್ಲಿಯೂ ವ್ಯಕ್ತಪಡುತ್ತಿಲ್ಲ. ಮುಂದಾದರೂ ಇದನ್ನು ಜಾರಿಗೆ ಕೊಡುವರೇ ಎಂಬ ವಿಚಾರ ಸಹ ಗೊತ್ತಾಗದಂತಾಗಿದೆ.

ಇನ್ನು ಕೆಲವರು ಈಗಾಗಲೇ ಏರ್ಪಾಡಾಗಿರುವ ಹಣಕಾಸಿನ ಸಮಿತಿ, ಎಷ್ಟಿಮೇಟ್ ಸಮಿತಿ, ಇತ್ಯಾದಿ ಸಮಿತಿಗಳೇ ಈ ಕಾರ್ಯಭಾಗವನ್ನು ಹೊತ್ತು ಕೆಲಸ ನಡೆಸಬಹುದೆಂದು ತಿಳಿಸಿದ್ದಾರೆ. ಹಾಗೆ ಈ ಸಮಿತಿಗಳೇ ಈ ಕೆಲಸವನ್ನೂ ಮಾಡುವುದಾಗಿದ್ದರೆ ಅದಕ್ಕೂ ಸಹ ನನ್ನ ಆಕ್ಷೇಪಣೆಯೇನೂ ಇಲ್ಲ. ಆದರೆ ಈ ಬಗ್ಗೆ ನಾನು ಹೇಳತಕ್ಕದ್ದಿಷ್ಟೇ—ಹಣಕಾಸಿನ ವಿಚಾರದಲ್ಲಿ ಸೂಕ್ತ ಸಲಹೆಗಳನ್ನು ನೀಡಬೇಕಾಗಿದ್ದರೆ, ಸರ್ಕಾರಿ ಇರಾಖೆಗಳ ಅನುಭವವಿರುವವರನ್ನೇ ಆರಿಸಿಕೊಂಡರೆ ಕೆಲಸ ಚೆನ್ನಾಗಿಯೂ ಜಾಗ್ರತೆಯಾಗಿಯೂ ಆದೀತೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಈ ಹಿಂದೆ ಆಗಿನ ಸರ್ಕಾರದವರು ಎರಡು ಸಮಿತಿಗಳನ್ನು ನೇಮಕಮಾಡಿದ್ದರು. ಅದು ನನಗೂ ಮತ್ತು ಮಾನ್ಯ ಹಣಕಾಸಿನ ಮಂತ್ರಿಗಳಿಗೂ ಚೆನ್ನಾಗಿ ಗೊತ್ತಿದೆ. ಆ ಸಮಿತಿಗಳಲ್ಲಿ ಅರಿತವರಿತವರೇ ಇದ್ದುದರಿಂದ ಆ ಸಮಿತಿಗಳ ಕಾರ್ಯಕಲಾಪಗಳು ಶೀಘ್ರವಾಗಿಯೂ ಮತ್ತು ಸಾಮರ್ಥ್ಯದಿಂದಲೂ ನಡೆದಿವೆಯೆಂಬುದು ಎಲ್ಲರಿಗೂ ಗೊತ್ತಿದೆ. ಈಗಲೂ ಸಹ ಅದೇ ರೀತಿ ಅನುಭವಶಾಲಿಗಳನ್ನೂ ದಕ್ಷರಾದವರನ್ನೂ ಸಮಿತಿಗೆ ನೇಮಿಸಬೇಕಾದುದು ಅಗತ್ಯ. ಇಂಥಾ ಸಮಿತಿಗೆ ಸ್ವಾತಂತ್ರ್ಯದಿಂದ ಕೆಲಸ ಮಾಡತಕ್ಕವರನ್ನು ಹಾಕಬೇಕು. ನಾನು ಒಟ್ಟಿನಲ್ಲಿ ಹೇಳುವುದಿಷ್ಟೆ—ನಾವು ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಕೂಲಂಕಷವಾಗಿ ಪರಿಶೀಲನೆಮಾಡಬೇಕು, ನಮ್ಮ ಹಣಕಾಸಿನ ಅಡಚಣೆಯನ್ನು ಭದ್ರವಾಗಿಟ್ಟುಕೊಳ್ಳಬೇಕು, ನಮ್ಮ ಪುರೋಭಿವೃದ್ಧಿಗೆ ಯಾವ ಯಾವ ಬಾಬಿನಲ್ಲಿ ಹಣವನ್ನು ಉಳಿಸಿಕೊಂಡು ಅದನ್ನು ಹಾಕಬೇಕು, ಅಭಿವೃದ್ಧಿ ಕಾರ್ಯಗಳ ರೀತಿನೀತಿಗಳು ಹೇಗೆ ಇರಬೇಕು, ಎಂಬೀ ವಿಚಾರಗಳನ್ನೆಲ್ಲಾ ಆಲೋಚನೆಮಾಡಬೇಕಾಗಿದೆ. ನಮ್ಮ ಆರ್ಥಿಕ ಸ್ಥಿತಿ ಉತ್ತಮವಾಗಲು ನಾವು ಎಷ್ಟು ತ್ವರಿತವಾಗಿ ಕಾರ್ಯ ನಡೆಸಿದರೆ ಅಷ್ಟೂ ನಮಗೆ ಒಳ್ಳೆಯದಾಗುತ್ತದೆ. ದೆಹಲಿಯ ಸೆಂಟ್ರಲ್ ಸೆಕ್ರೆಟೇರಿಯಟ್ಟಿನಲ್ಲಿ ಮಿತವ್ಯಯದ ಬಗ್ಗೆ ಬಹಳ ಬಲವಾದ ಕಾರ್ಯಾಚರಣೆ ನಡೆಸುತ್ತಿದ್ದಾರೆಯೆಂಬುದಾಗಿ ನಾವು ಕೇಳುತ್ತಿದ್ದೇವೆ. ನಾವೂ ಕೂಡ ಇದರಂತೆ ಮಾಡಿ ಕಾರ್ಯವಿಧಾನವನ್ನು ಬದಲಾಯಿಸಿ ದಕ್ಷತೆಯನ್ನು ಹೆಚ್ಚಿಸಬೇಕಾಗಿದೆ. ಅಂತೂ ನಾನು ಈಗಾಗಲೇ ಏತಕ್ಕೆ ಒಂದು ವಿಶೇಷ ತರಹೆಯ ಆರ್ಥಿಕ ಸಮಿತಿಯನ್ನು ನೇಮಿಸಬೇಕೆಂಬುದನ್ನು ತಿಳಿಸಿದ್ದೇನೆ. ಇದನ್ನು ಒಪ್ಪದೇ ಇತರ ಯಾವ ರೀತಿಯಲ್ಲಾದರೂ ಕೆಲಸ ಮಾಡಲು ಏರ್ಪಡಿಸಿದರೆ ಅದಕ್ಕೆ ನನ್ನ ಸಮ್ಮತಿಯಿದೆ. ಮುಂದಿನ ಆಯವ್ಯಯ ಪಟ್ಟಿಯಾವರೋ ಸಧ್ಯದಲ್ಲಿಯೇ ನಮ್ಮ ಮುಂದೆ ಬರಲಿದೆ. ಒಟ್ಟಿನಲ್ಲಿ ಉತ್ತಮವಾದ ಬಡ್ಜೆಟ್ ಬಂದರೆ, ಇದಕ್ಕಾಗಿ ನನಗಿಂತಲೂ ಹೆಚ್ಚಾಗಿ ಯಾರಿಗೂ ಸಂತೋಷವಾಗದಿರಲಾರದು. ಆದರಿಂದ ಸರ್ಕಾರದವರು ಮತ್ತು ಮಾನ್ಯ ಸಭೆಯವರೂ ಈ ನಿರ್ಣಯವನ್ನು ಅಂಗೀಕರಿಸಬೇಕೆಂದು ಮತ್ತೊಮ್ಮೆ ಪ್ರಾರ್ಥಿಸುತ್ತೇನೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು (ಆರ್ಥಿಕ ಮತ್ತು ಕೈಗಾರಿಕಾ ಸಚಿವರು) :—ಸ್ವಾಮಿ, ಈ ಯಾವ ನಿರ್ಣಯವನ್ನು ಈ ದಿವಸ ನನ್ನ ಮಾನ್ಯ ಮಿತ್ರರಾದ ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು ತಂದಿದ್ದಾರೋ ಇದರ ವಿಚಾರದಲ್ಲಿ ಎರಡು ಮಾತುಗಳನ್ನಾಡಬೇಕಾದ್ದು ಅವಶ್ಯಕವಾಗಿದೆಯೆಂದು ನನಗೆ ತಿಳಿದು ಬರುತ್ತಿದೆ. ಮೊಟ್ಟನೊದಲನೇಯದಾಗಿ ಈ ಒಂದು ನಮ್ಮ ಸಂಸ್ಥಾನದ ಹಣಕಾಸಿನ ಹೊಣೆಗಾರಿಕೆಯು ನನ್ನ ತರೆಯ ಮೇರೆ ಬಿದ್ದಿರುವುದರಿಂದ ಯಾರೇ ಆಗಲೀ ಈ ಹಣಕಾಸಿನ ಭದ್ರತೆಯ ವಿಚಾರದಲ್ಲಿ, ನಮ್ಮ ಆರ್ಥಿಕ ವಿಚಾರದಲ್ಲಿ ಯಾವ ಸೂಚನೆಗಳನ್ನು ಕೊಟ್ಟಾಗ್ಯೂ ನಾನು ಅವುಗಳನ್ನು ಸ್ವಾಗತಿಸಲು ತುಂಬಾ ಸಂತೋಷಪಡುತ್ತೇನೆ. ಇಷ್ಟೇ ಅಲ್ಲದೆ ಒಂದು ವೇಳೆ ಯಾರಾದರೂ ಎರೆಪೋರಿ ಈ ಸಂಬಂಧವಾಗಿ ಟೀಕೆ ಮಾಡಿದಾಗಲೂ ನಾನು ಅಗಲೂ ಬೇಸರ ಪಟ್ಟುಕೊಳ್ಳಲಿಲ್ಲ. ನಾನು ಈ ಉತ್ತರವನ್ನು ಈ ಸ್ಥಳದಲ್ಲಿದ್ದಾಗಲೂ ಹೇಳುತ್ತಿದ್ದೇನೆ. ಮತ್ತು ಹೊರಗಡೆ ಆಲಾಯಿದ ನನ್ನಲ್ಲಿ ಚರ್ಚೆ ನಡೆಸಲು ಬಂದಿದ್ದಂಥ ಕಾಲದಲ್ಲೂ ಕೂಡ ಇದೇ ಮಾತನ್ನು ಅಗಲೂ ಹೇಳಿದ್ದೇನೆ. ಈ ಒಂದು ನಿರ್ಣಯವನ್ನು ಶ್ರೀಮಾನ್ ಡಿ ಎಚ್. ಚಂದ್ರಶೇಖರಯ್ಯನವರು ಸಭೆಯ ಮುಂದೆ ಮಂಡಿಸಿರುವ ವಿಚಾರದಲ್ಲಿ ಆಕ್ಷೇಪಣೆಯೆನೂ ಇಲ್ಲ. ನಾನು ಇದನ್ನು ಸ್ವಾಗತಿಸುತ್ತೇನೆ.

ಎಷ್ಟರಮಟ್ಟಿಗೆ ಯಾವ ಸ್ವರೂಪವನ್ನು ಅದು ತಾಳಿದೆ ಎಂಬುದನ್ನು ಈಗ ನೋಡಬೇಕು. ಅದರ ಅವಶ್ಯಕತೆ ವಿಚಾರದಲ್ಲಿ ಸ್ವಲ್ಪ ಭಿನ್ನಾಭಿಪ್ರಾಯವಿರಬಹುದು. ಅದರೆ ಸಂಸ್ಥಾನದ ಆರ್ಥಿಕಸ್ಥಿತಿಯನ್ನು ಸಮತೂಗಿಸಬೇಕಾದ ಅಗತ್ಯ ಈವರಿಗೂ ಇದೆ. ಹಿಂದೆಯೂ ಇತ್ತು ಮತ್ತು ಮುಂದೆಯೂ ಇರುತ್ತದೆ. ಆದರಲ್ಲಿ ಏನೂ ಸಂಶಯ ಎಲ್ಲ. ಅದರ ಅವಶ್ಯಕತೆ ವಿಚಾರದಲ್ಲಿ ಯಾವ ಭಿನ್ನಾಭಿಪ್ರಾಯಕ್ಕೂ ಅವಕಾಶವಿಲ್ಲ. ಆದುದರಿಂದ ಯಾವ ಸದಸ್ಯರೇ ಇಗಲಿ ಈ ವಿಚಾರದಲ್ಲಿ ಏನಾದರೂ ಅನುಮಾನಪಟ್ಟರೆ ಮತ್ತು ಅದನ್ನು ವ್ಯಕ್ತಪಡಿಸಬೇಕೆಂದಿದ್ದರೆ ಅದಕ್ಕೆ ಕಾರಣವಿಲ್ಲ ಮತ್ತು ಅದು ಸ್ವಾಭಾವಿಕವಾದದ್ದು ಎಂದು ಹೇಳುತ್ತೇನೆ. ನಾನೂ ಕೂಡ ಕೆಲವು ಸಂದರ್ಭಗಳಲ್ಲಿ ಈ ವಿಚಾರದಲ್ಲಿ ನಾವು ಬಹಳ ಜಾಗರೂಕತೆಯಿಂದ ಮತ್ತು ಎಚ್ಚರಿಕೆಯಿಂದ ಖರ್ಚು ಮಾಡಬೇಕಾಗಿದೆ ಎಂದು ಹೇಳಿದ್ದೇನೆ. ಆದರೆ ಇಷ್ಟು ಹೆಳಿದ ಮಾತ್ರಕ್ಕೆ ಮತ್ತು ಒಂದು ಎಚ್ಚರಿಕೆಯನ್ನು ಸೂಚಿಸಿದ ಮಾತ್ರಕ್ಕೆ ಆರ್ಥಿಕ ಸ್ಥಿತಿ ಏನೋ ಕೊಟ್ಟಿದೆ ಎಂದು ಅಭಿಪ್ರಾಯಪಡುವುದಕ್ಕೆ ಕಾರಣವಿಲ್ಲ. ಒಂದು ವೇಳೆ ಆ ರೀತಿ ಅಭಿಪ್ರಾಯಪಟ್ಟರೆ ಅದು ನನ್ನ ಹೇಳಿಕೆಗಳಿಗೆ ಸರಿಯಾದ ವ್ಯಾಖ್ಯಾನವಲ್ಲ ಎಂದು ಹೇಳುತ್ತೇನೆ. ಮಾನ್ಯ ಹಣಕಾಸಿನ ಮಂತ್ರಿಗಳು ಈ ವಿಚಾರವಾಗಿ ಈಗಾಗಲೇ ಹಣಕಾಸಿನ ಪರಿಸ್ಥಿತಿ ಭದ್ರವಾಗಿಲ್ಲ ಎಂದು ಅಭಿಪ್ರಾಯ ಸೂಚಿಸಿದ್ದಾರೆಂದು ಶ್ರೀ ಸಿದ್ದಪ್ಪನವರು ಈಗ ಹೇಳಿದರು. ಹಿಂದಿನ ಬಜೆಟ್ ಭಾಷಣದಲ್ಲಿ ಅವನು ಸೂಚಿಸಿದೆಯೆಂದು ಹೇಳಿದ್ದನ್ನು ಕೇಳಿ ಆಶ್ಚರ್ಯವಾಯಿತು. ಆದರೆ ಆ ಭಾಷಣದಲ್ಲಿ ಹಾಗಿಲ್ಲ. ಆ ರೀತಿ ಎಲ್ಲಾದರೂ ಹೇಳಬಹುದೇ ಹಿಂದೆ ಹೇಳಿರುವುದು ಈ ರೀತಿಯಾಗಿದೆ.

"I have placed the position of Mysore's finances before the House without any embellishments. There is no reason in my humble opinion for any one to be over-pessimistic or unduly optimistic. Intrinsically, our finances are sound."

ಹೀಗೆ ನಾನು ಹೇಳಿರುವಾಗ ಇದನ್ನು ಬೇರೆ ರೀತಿಯಲ್ಲಿ ವ್ಯಾಖ್ಯಾನ ಮಾಡತಕ್ಕದ್ದು ವಾಸ್ತವಕ್ಕೆ ದೂರವಾಗಿರುವುದು. ಆದುದರಿಂದ ನಾನು ಆ ಅನ್ಯಾಯಮಾಡಿದ ಹಾಗಾಗುತ್ತದೆ. ಇದನ್ನು ನಾನು ಸಭೆಯ ಮುಂದೆ ಇಡದಿದ್ದರೆ ಇದು ಹಾಗೆಯೇ ನಿಂತಿರುತ್ತದೆ. ಆದ್ದರಿಂದ ಅವಕಾಶ ಸಿಕ್ಕಿ ನಾನು ಹೇಳುತ್ತಿದ್ದೇನೆ. ನಮ್ಮ ಹಣಕಾಸಿನ ಸ್ಥಿತಿ ಇವತ್ತಿಗೂ ಹದಗೆಟ್ಟಿಲ್ಲ ಮತ್ತು ಎಂದೆಂದಿಗೂ ಹಾಗಾಗುವುದಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಹಣಕಾಸಿನ ಸ್ಥಿತಿ ಭದ್ರವಾಗಿಲ್ಲವೆಂದು ಹೇಳುವುದನ್ನು ನಾನು ಒಪ್ಪಲಾರೆ.

ಇನ್ನು ಈ ವಿಚಾರದಲ್ಲಿ ಇತರ ಮಾನ್ಯ ಸದಸ್ಯರು ಹೇಳಿದ್ದಕ್ಕೆ ಉತ್ತರ ಕೊಡಬೇಕಾಗಿದೆ. ನನ್ನ ಮಾನ್ಯ ಮಿತ್ರರಾದ ಶ್ರೀ ಚಂದ್ರಶೇಖರಯ್ಯನವರು ಹಿಂದಿನ ಸ್ಥಿತಿ ಗತಿಗಳು ಹೇಗಿದ್ದುವೆಂದು ದೀರ್ಘವಾಗಿ ಹೇಳಿದ್ದಾರೆ. ಅವುಗಳಲ್ಲಿ ಪ್ರತಿಯೊಂದಕ್ಕೂ ಉತ್ತರ ಕೊಡಬೇಕಾಗಿಲ್ಲ. ಆದರೆ ರಿಸರ್ವ್ ಯಾವುದಿತ್ತೋ ಅದರಿಂದ ನಾವು ನಮ್ಮ ಖರ್ಚುಗಳಿಗೆ ಹಣವನ್ನು ತೆಗೆದಿರುವುದು ನಾವೇ ಪ್ರಾರಂಭ ಮಾಡಿದ ಒಂದು ಹೊಸ ನೀತಿಯಲ್ಲ ಎಂಬುದನ್ನು ಎಲ್ಲರೂ ಒಪ್ಪಬೇಕು. ಅದು ಬಹಳ ವರ್ಷಗಳಿಂದ ನಡೆಯುತ್ತಿದೆ.

ಶ್ರೀ ಡಿ. ಎಚ್. ಚಿಂದ್ರಶೇಖರಯ್ಯನವರು:—ಹಿಂದೆ ಹೆಚ್ಚಾಗಿ ಶೇಖರಿಸಿ ಅದರಿಂದ ಎಲ್ಲೋ ಸ್ವಲ್ಪ ತೆಗೆದು ಕೊಳ್ಳುತ್ತಿದ್ದರು.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹಣ ರಿಸರ್ವ್ ಮಾಡುತ್ತಾ ಹೋಗುವುದಕ್ಕೆ ಮತ್ತು ಹೆಚ್ಚಿಸುತ್ತಾ ಹೋಗುವುದಕ್ಕೆ ಕೊನೆ ಮೊದಲೇ ಇಲ್ಲ. ಆ ರೀತಿ ಕಷ್ಟಪಟ್ಟು ರಿಸರ್ವ್ ಇಡುವುದು ಸರ್ಕಾರದ ಬೊಕ್ಕಸಕ್ಕೆ ಹಣ ತುಂಬುವುದಕ್ಕಲ್ಲ. ನೂರಾರು ವರ್ಷದ ಮೇರೆ ಬರುವ ಜನಾಂಗಕ್ಕೆ ಈ ದಿವಸ ನಾವು ತೆಗೆದು ಕೊಂಡಿರುವ ಯೋಜನೆಯ ಫಲ ದೊರೆಯುತ್ತದೆ. ಹಾಗೆ ಮಾಡುವುದನ್ನು ಬಿಟ್ಟು 30-40 ಕೋಟಿ ರೂಪಾಯಿಗಳನ್ನು ಸರ್ಕಾರದ ಬೊಕ್ಕಸದಲ್ಲಿ ಭದ್ರವಾಗಿಡುವುದರಿಂದ ತೃಪ್ತಿಯಾಗುತ್ತದೆಯೆ ? ಆದ್ದರಿಂದ ಅದನ್ನು ಸಮುಪಯೋಗಪಡಿಸಿ ಜನಾರೋಗ್ಯ, ವಿದ್ಯಾಭ್ಯಾಸ, ನೀರಾವರಿ ಕಾಂಗಾರಿಗಳು, ಕೈಗಾರಿಕೆಗಳು ಮುಂತಾದುವುಗಳನ್ನು ಅಭಿವೃದ್ಧಿಪಡಿಸಲು ಖರ್ಚು ಮಾಡಿದರೆ ಸದ್ವಿನಿಯೋಗವಾದಂತಾಗುತ್ತದೆ. ಇದರಿಂದ ಮುಂದೆ ಎಷ್ಟು ಉತ್ತಮ ಸ್ಥಿತಿ ಬರುತ್ತದೆಂಬುದನ್ನು ಮಾನ್ಯ ಸದಸ್ಯರು ಯೋಚನೆ ಮಾಡಬೇಕು. ಈಗ ಖರ್ಚು ಮಾಡಿರುವುದು ಮುಂದೆ ಫಲ ಕೊಡುತ್ತದೆ. ಹಿಂದಿನ ಸರ್ಕಾರ ಒಂದು ಕೋ ಆರ್ಡಿನೇಷನ್ ಸಮಿತಿ ಮಾಡಿ ಅಲ್ಲಿ ತಯಾರಿಸಿರುವ ಯೋಜನೆಗಳಿಗೆ ಮತ್ತು ಕೊಟ್ಟಿರುವ ಸೂಚನೆಗಳಿಗೆ ಈಗ ಸಾಕಷ್ಟು ಆಧಾರವಾಗಿದೆ ಎಂದು ಹೇಳುತ್ತೇನೆ. ಮತ್ತು ನಾವು ಖರ್ಚು ಮಾಡುತ್ತಿರುವುದಕ್ಕೆ ಆ ಸಮಿತಿಯವರು ಕೊಟ್ಟಿರುವ ಅಭಿಪ್ರಾಯವು ಬೆಂಬಲವಾಗಿದೆ. ನಾವು ಬರುವುದಕ್ಕೆ ಮುಂಚೆ ಕೋಆರ್ಡಿನೇಷನ್ ಸಮಿತಿಯವರು ಯಿದ್ದಾನಂತರ ಪುನರ್ರಚನಾ ಯೋಜನೆ ಮುಂತಾದುವುಗಳಿಗೆ ಸದ್ಯದಲ್ಲಿ ಹಣ ಸಾಲದೇಯಿರುವುದರಿಂದ ಮೂರು ಕೋಟಿ ರೂಪಾಯಿಗಳನ್ನು ಅದಕ್ಕಾಗಿ ನಾನ್ ರೆಕರಿಂಗ್ ಎಕ್ಸ್‌ಪೆಂಡಿಚರ್ ಫಂಡಿನಿಂದ ವ್ಯಯಮಾಡಬಹುದು, ಮುಂದಿನ ಕೆಲವು ವರ್ಷಗಳ ತನಕ ಖರ್ಚು ಮಾಡಬಹುದು ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಇದನ್ನೆಲ್ಲಾ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಹಿಂದಿನ ಸರ್ಕಾರ ನಿರ್ಪಡಿಸಿದ್ದ ಸಮಿತಿಯವರು ಈ ಒಂದು ನೀತಿಯನ್ನು ನಮ್ಮ ಮುಂದಿಟ್ಟಿದ್ದಾರೆ. ಒಂದು ಕಡೆ ಆ ರೀತಿ ಹೇಳಿ ಈ ದಿವಸ ಇನ್ನೊಂದು ರೀತಿ ಟೀಕೆ ಮಾಡಿದರೆ ಏನು ಹೇಳಬೇಕು ? ಇದನ್ನು ನೋಡಿ ಆಶ್ಚರ್ಯ

(ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.)

ವಾಗುತ್ತದೆ. ಆದ್ದರಿಂದ ಸಂತೋಷ ಪಡಬೇಕೆ ಅಥವಾ ವ್ಯಸನ ಪಡಬೇಕೆ ಎಂಬುದನ್ನು ಮಾನ್ಯ ಮಿತ್ರರೇ ಹೇಳಬೇಕು. ಇದು ನಾರ್ಮರ್ ಖರ್ಚಲ್ಲ. ನಾನ್ ರೆಕರಿಂಗ್ ಖರ್ಚು. ಯುದ್ಧಾನಂತರ ಪುನರ್ರಚನಾ ಯೋಜನೆಯ ರೂಪದಲ್ಲಿದೆ ಎಂದು ಪದೇ ಪದೇ ಅಂಕಿ ಅಂಶ ಕೊಟ್ಟು ಸಮಾಧಾನ ಹೇಳಿದ್ದೇನೆ. ಅದನ್ನೇ ಪುನಃ ಹೇಳಬೇಕೆಂದು ಕೇಳಿದರೆ ಅದು ನನ್ನ ತಪ್ಪಲ್ಲ. ಈಗ ಪ್ರತಿಪಕ್ಷದ ನಾಯಕರು ಈ ಎರಡು ಕೋಟಿ ರೂಪಾಯಿಗಳನ್ನು ಎಲ್ಲಿಂದ ತರುತ್ತೀರಿ, ಜೇಬಿಗೆ ಕೈ ಹಾಕಿದರೆ ಅದರಲ್ಲಲ್ಲ, ಅದನ್ನು ಹೇಗೆ ಕೊಡುವುದು ಎಂದು ಕೇಳಿದರು. ಆದರೆ ಅವರ ಜೇಬಿನ ಸ್ಥಿತಿಗತಿಗಳು ನನಗೇನು ಗೊತ್ತು? ನನ್ನ ಜೇಬಿನ ಸ್ಥಿತಿಗತಿ ಗೊತ್ತು. ರೆವೆನ್ಯೂ ಬಾಬನ್ನು ನಾವು ಯಾವ ರೀತಿಯಲ್ಲೂ ಬದಲಾವಣೆ ಮಾಡುವುದಿಲ್ಲ. ನಾವು ಖರ್ಚು ಮಾಡಿರುವುದೆಲ್ಲಾ ಬೇರೆ ವಿಧದಲ್ಲಿ ವಾಪಸು ಬರತಕ್ಕುದು; ಅದರೆ ಕ್ಷಿಪ್ರದಲ್ಲಲ್ಲ. ಇದು ನಮ್ಮ ಬಡ್ಜೆಟ್ಟಿನ ಸ್ಥಿತಿಯನ್ನು ಬಾಧಕ ಪಡಿಸುವುದಿಲ್ಲ. ಇನ್ನೂ ಅರ್ಧ ಭಾಗ ಕೂಡ ಸರಿಯಾಗಿ ಆಗಿಲ್ಲ. ಇದಕ್ಕಾಗಿ ಇನ್ನೂ ಕೊಡಬೇಕಾಗಿದೆ. ಹೀಗೆ ಅರ್ಧ ಕೆಲಸವಾಗಿರುವಾಗ ಈ ದಿವಸ ಹಣಕಾಸಿನ ಪರಿಸ್ಥಿತಿ ಹೇಗಿದೆಯೆಂದು ಹೇಳುವುದಕ್ಕಾಗುವುದಿಲ್ಲ. ನಿನ್ನೆ ದಿವಸ ಆಡಿಟ್ ರಿಪೋರ್ಟ್ ಮತ್ತು ಅಪ್ರೋಪ್ರಿಯೇಷನ್ ಲೆಕ್ಕವನ್ನು ನೋಡುತ್ತಿರುವಾಗ ಒಂದು ಕೋಟಿ ರೂಪಾಯಿಗಳವರೆಗೆ ಉಳಿತಾಯವಾಗಿದೆಯೆಂದು ಮಾನ್ಯ ಮಿತ್ರರು ಟೀಕೆ ಮಾಡಿದರು.

ಯಾವ ಸರ್ಕಾರವೇ ಆಗಲಿ ಆಡಳಿತ ನಡೆಸುವಾಗ ಕೆಲವು ಭಾಗಗಳಲ್ಲಿ ಆಗಲೇ ಲೆಕ್ಕ ಸಿಕ್ಕುವುದಿಲ್ಲ; ಏಕೆಂದರೆ ಬೇರೆ ಕಡೆ ಉಳಿತಾಯವಿರುತ್ತದೆ. ಆದುದರಿಂದ ಯಾರೂ ಏನೂ ಅನುಮಾನ ಪಡಬೇಕಾಗಿಲ್ಲ. ಉಳಿತಾಯವೆಂದು ತೋರಿಸಿರುವ ಬಾಬಿನಲ್ಲಿ ಇನ್ನೂ ಕೊಡಬೇಕಾದದ್ದಿರುತ್ತದೆ.

ಶ್ರೀ ಎಲ್. ಸಿದ್ದಪ್ಪನವರು.—ಈ ರೀತಿ ಉಳಿತಾಯ ವಿರಬಾರದೆಂದು ನಾವು ಹೇಳಿದ್ದು.

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ನಿಮ್ಮ ಕಾಲದಲ್ಲಿಯೂ ಇತ್ತು. ಕೆಲವು ಸಂದರ್ಭಗಳಲ್ಲಿ ಈ ವರ್ಷ ಮಾಡಿರುವ ಕೆಲಸಗಳಿಗೆ ಈ ವರ್ಷವೇ ಬಿಲ್ಲುಗಳು ಬಂದು ಅವುಗಳಿಗೆ ಹಣ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ, ಮುಂದಿನ ವರ್ಷ ಕೊಡಬೇಕಾಗುತ್ತದೆ. ಕೆಲವು ಯಂತ್ರೋಪಕರಣಗಳಿಗೆ ಒಂದು ವರ್ಷದಲ್ಲಿ ಆರ್ಡರ್ ಕೊಟ್ಟಿರುತ್ತೇವೆ; ಅವು ಆ ವರ್ಷವೇ ಬರುವುದಿಲ್ಲವಾದ್ದರಿಂದ ಹಣ ಕೊಡುವುದಕ್ಕಾಗುವುದಿಲ್ಲ. ಆಗ ಆ ಹಣ ಆ ವರ್ಷ ಉಳಿತಾಯವಾಗುತ್ತದೆ. ಇಂತಹ ಸಂದರ್ಭಗಳನ್ನೂ ತಪ್ಪಿಸುವುದಕ್ಕಾಗುವುದಿಲ್ಲ. ಹೀಗೆ ಖರ್ಚಿನಲ್ಲಿ ಸ್ವಲ್ಪ ಹೆಚ್ಚು ಕಡಮೆಯಾಗಬಹುದು. ನಾವು ways and means ಹೇಗೆ ಮಾರ್ಪಾಡು ಮಾಡಿಕೊಳ್ಳುತ್ತೇವೋ ಹಾಗೆಯೇ ಇದನ್ನೂ ಮಾಡಿಕೊಳ್ಳುತ್ತೇವೆ. ಆದುದರಿಂದ ಬಡ್ಜೆಟ್ ಪರಿಸ್ಥಿತಿ ಅಷ್ಟು ಕಷ್ಟವಾಗಿಲ್ಲವೆಂದು ಸಭೆಯ ಮುಂದೆ ತಿಳಿಸುತ್ತೇನೆ.

ಕೆಲವು ಇಲಾಖೆಗಳನ್ನು ಕೇಂದ್ರ ಸರ್ಕಾರಕ್ಕೆ ವಹಿಸಿಕೊಂಡದ್ದರಿಂದ ನೆಟ್‌ರೆವೆನ್ಯೂ ಗ್ಯಾಪ್ 345 ಲಕ್ಷ ರೂಪಾಯಿಗಳನ್ನೂ ಐದು ವರ್ಷಕಾಲ ಅವರು ಕೊಡುತ್ತಾ ಬರುತ್ತಾರೆ, ಇದರಿಂದ ವರ್ಷ ವರ್ಷ ಜಾಸ್ತಿಯಾಗುವ ಸಂಭವವಿದ್ದುದನ್ನು ಕಳೆದುಕೊಂಡಿದ್ದೇವೆ, ಐದು ವರ್ಷಗಳ ಕಾಲ 345 ಲಕ್ಷಕ್ಕಿಂತ ಹೆಚ್ಚು ಬರುವ ಸಂಭವವೇ ಇಲ್ಲವೆಂದು ಶ್ರೀಮಾನ್ ಚಂದ್ರಶೇಖರಯ್ಯನವರು ಹೇಳಿದರು. ಈ ವಿಚಾರದಲ್ಲಿ ಎಲ್ಲವನ್ನೂ ಬಹಿರಂಗವಾಗಿ ಹೇಳುವುದಕ್ಕೆ ನಾನು ಇಷ್ಟ ಪಡುವುದಿಲ್ಲ. ಒಟ್ಟಿನಲ್ಲಿ ನಿಜವಾಗಿ ತಿಳಿಸಬೇಕಾದರೆ, ಹಿಂದೆ ನಾವು ಸ್ವಲ್ಪ ಹೆಚ್ಚಾಗಿ ವರಮಾನ ತೋರಿಸಿ ರೆಕ್ಕ ಹಾಕಿದೆವು, ಆದರಿಂದ 345 ಲಕ್ಷ ಬಾಯಿತು. ನರಿಯಾಗಿ ನೋಡಿದ್ದರೆ ಇನ್ನೂ ಕಡಮೆಯೇ ಇತ್ತು. ಹಿಂದಿನ ಖರ್ಚನ್ನೇ ಆಧಾರವಾಗಿಟ್ಟುಕೊಂಡು ವರಮಾನವೂ ಅದೇ ರೀತಿ ಇರುತ್ತದೆ ಎನ್ನುವುದಕ್ಕೆ ಮೇಲೆ 325 ಲಕ್ಷ ಎಂದು ನಿರ್ಧಾರ ಮಾಡಲಾಯಿತು. ಈಗೆಗೆ ಪ್ರಯತ್ನಪಟ್ಟು ಇನ್ನೂ 2 ಲಕ್ಷ ಹೆಚ್ಚು ಮಾಡಿಕೊಂಡಿದ್ದೇವೆ. ಆಗ ಈ ಇರಾಯಿಂದ ಎಷ್ಟು ವರಮಾನ ಬರುತ್ತಿತ್ತೆಂಬುದು ತಮಗೇ ಗೊತ್ತಿದೆ. ಅಷ್ಟು ವರಮಾನ ಈ ಹೊತ್ತು ಬರುತ್ತಿದೆಯೇ ಎಂದು ನಾವು ಯೋಚನೆ ಮಾಡಬೇಕಾಗುತ್ತದೆ. ಅವರ ಲೆಕ್ಕಗಳನ್ನು ನಿಮಗೆ ಬೇಕಾದರೆ ಕೊಡುತ್ತೇನೆ, ಅದನ್ನು ನೋಡಿದರೆ ಆಗ ನಿಜವಾದ ಸ್ಥಿತಿ ಗೊತ್ತಾಗುತ್ತದೆ, ನಾವು ಮಾಡಿರತಕ್ಕ ಏರ್ಪಾಡು ಅಥವ ಒಪ್ಪಂದ ನಮ್ಮ ಅನುಕೂಲಕ್ಕಾಗಿದೆಯೆ ಅಥವಾ ಪ್ರತಿಕೂಲಕ್ಕಾಗಿದೆಯೆ ಎನ್ನುವುದು. ಈ ಏರ್ಪಾಡು ಬಹಳ ಮಟ್ಟಿಗೆ ನಮಗೇ ಲಾಭದಾಯಕವಾಗಿದೆಯೆಂದು ಮಾತ್ರ ಹೇಳುತ್ತೇನೆ. ಏಕೆಂದರೆ, ಇನ್ನು ಹೆಚ್ಚು ಹೇಳಿದರೆ, ಕೇಂದ್ರ ಸರ್ಕಾರದವರು ಏನೋ ನಮಗೆ ಬಹಳ ಹೆಚ್ಚಾಗಿ ಕೊಟ್ಟು ಬಿಟ್ಟದ್ದಾರೆಂಬ ಅಭಿಪ್ರಾಯ ಹೊರಗಡೆ ಬರಬಹುದು. ರೈಲ್ವೆ ಇರಾಖೆಯೊಂದನ್ನು ಉದಾಹರಣೆಗೆ ತೆಗೆದುಕೊಳ್ಳೋಣ; ಆಗ ನಮ್ಮಲ್ಲಿ ಜಾರಿಯಲ್ಲಿದ್ದ ಸಂಬಳದ ಸ್ಕೇಲುಗಳನ್ನಿಟ್ಟುಕೊಂಡು ಎಪ್ಪತ್ತು-ಎಂಭತ್ತು ಲಕ್ಷ ಉಳಿಯುತು. ಈ ಹೊತ್ತು ಅವರ ಸ್ಕೇಲುಗಳನ್ನು ನಾವು ಕೊಟ್ಟಿದ್ದರೆ ವರಮಾನ ಎಷ್ಟು ಉಳಿಯುತ್ತಿತ್ತೆಂಬುದನ್ನು ಸ್ವಲ್ಪ ಯೋಚನೆ ಮಾಡಬೇಕು. ಮಾನ್ಯ ಸದಸ್ಯರು ಚೆನ್ನಾಗಿ ಯೋಚನೆ ಮಾಡಿ ವಿಷಯವನ್ನು ತಿಳಿದುಕೊಂಡರೆ ಸರ್ಕಾರಕ್ಕೆ ಉಪಕಾರವಾಗುತ್ತದೆಂದು ಹೇಳಬಯಸುತ್ತೇನೆ.

ಇನ್ನು ಇಂತಹ ಒಂದು ಸಮಿತಿಯನ್ನು ಮಾಡಬೇಕೇ ಬೇಡವೆ ಎಂಬುದು ಮುಖ್ಯವಾದ ವಿಚಾರ. ಸರ್ಕಾರಕ್ಕೆ ಸಲಹೆ ಮಾಡಲು ಒಂದು ಸಮಿತಿಯನ್ನು ಸರ್ಕಾರದವರು ನೇಮಕ ಮಾಡಬೇಕೆಂದು ಮಾನ್ಯ ಸದಸ್ಯರಾದ ಶ್ರೀಮಾನ್ ಚಂದ್ರಶೇಖರಯ್ಯನವರು ನಿರ್ಣಯದಲ್ಲಿ ಸೂಚಿಸಿದ್ದಾರೆ. ಇಂತಹ ಒಂದು ಸಮಿತಿ ಅವಶ್ಯಕತೆ ಇದೆಯೆ ಎಂಬುದನ್ನು ಪರಿಶೀಲಿಸುವಾಗ ತಾವು ಒಂದೆರಡು ವಿಷಯಗಳನ್ನು ತಿಳಿದು ಕೊಳ್ಳಬೇಕು. ಸರ್ಕಾರದವರು ನೇಮಿಸತಕ್ಕ ಸಮಿತಿ ಒಂದು ಆಡ್ ಹಾಕ್ ಸಮಿತಿಯಾಗುತ್ತದೆಯೇ ಏನಾ ಸ್ಟ್ಯಾಚುಟರಿ ಸಮಿತಿಯಾಗುವುದಿಲ್ಲ. ವಿಶೇಷ ಸಮಿತಿಗಳನ್ನು ಸರ್ಕಾರದವರು ನೇಮಿಸುತ್ತಾರೆ. ಅಲ್ಲದೆ ಈ ಸಭೆಯವರು ಅನೇಕ ಸಮಿತಿಗಳನ್ನು ಮಾಡಿರುವುದರಲ್ಲಿ ಎಸ್ಟಿಮೇಟ್ಸ್ ಸಮಿತಿ ಎಂದು ಒಂದನ್ನು ನೇಮಿಸಿದ್ದಾರೆಂಬುದು ತಮಗೇ ಗೊತ್ತಿದೆ. ಇದಕ್ಕೇ ವರಮಾನ, ಕಚ್ಚಿ ಇದನ್ನೆಲ್ಲಾ ಪರಿಶೀಲಿಸಿ ರಿಪ್ರೆಂಟ್ ಮೆಂಟ್ ಮಾಡಬೇಕಾದರೆ ಅದನ್ನೂ ಪರೀಕ್ಷಿಲನೆ ಮಾಡಿ ಸಲಹೆ ಮಾಡುವುದಕ್ಕೆ ಅಧಿಕಾರವಿದೆ. ಈ ವಿಚಾರವನ್ನು ಚೆನ್ನಾಗಿ ತಿಳಿದು ಕೊಳ್ಳಬೇಕು. ಅವರು ಇನ್ನೊಂದು ವಿಚಾರ ಹೇಳಿದರು, ಅವರು ಸೂಚಿಸಿರುವ ಸಮಿತಿಯಲ್ಲಿ ಕೆಲವು ತಜ್ಞರಿದ್ದರೆ ಒಳ್ಳೆಯದೆಂದು ಹೇಳಿದರು. ಇದರಲ್ಲಿ ಅವರ ಅಭಿಪ್ರಾಯ ಬೇರೆಂಬುದು ಸರಿಯಾಗಿ ಗೊತ್ತಾಗಲಲ್ಲ. ಈ ಸಭೆಯ ಸದಸ್ಯರ ಸ್ಥಾನಕ್ಕೆ ಇರುವ ತಜ್ಞರೋ ಅಥವ ಹೊರಗಿನವರೋ ಗೊತ್ತಾಗುವುದಿಲ್ಲ. ಒಬ್ಬ ಬ್ರರು ಹೊರಗಿನವರಿರಬಹುದೆಂದು ಸೂಚನೆ ಕೊಟ್ಟರು. ಸಮಿತಿಯಲ್ಲಿ ತಜ್ಞರಿರುವುದೇನೋ

ಒಳ್ಳೆಯದು. ಹೀಗೆ ಈ ನಿರ್ಣಯದ ಸಂಬಂಧವಾಗಿ ನಾನು ಅಭಿಪ್ರಾಯ ಸೂಚಿಸಿದ್ದಾರೋ ಇದೇ ಅಭಿಪ್ರಾಯ ದಂತೆ ನಮ್ಮೆಲ್ಲರ ಅಭಿಪ್ರಾಯದಲ್ಲೂ ಯಾರು ತಜ್ಞರೆಂದಿದ್ದಾರೋ ಅವರನ್ನೇ ಈ ಕೆಲಸಕ್ಕೆ ಹಾಕಿದ್ದೇವೆ. ಯಾವ ಎಕನಾಮಿ ಅಧಿಕಾರಿಗಳನ್ನು ಇಷ್ಟು ಹೋಗಳುತ್ತಿದ್ದಾರೋ ಅವರನ್ನೇ ನೇಮಿಸಿದೆವು; ಅವರ ಕೆಲಸವನ್ನು ನಾನೂ ಒಪ್ಪುತ್ತೇನೆ.

ಜನಾಬ್ ಜೆ. ಮಹಮದ್ ಇಮಾಂರವರು.—ಹೊಗಳುವುದೆಂದರೆ, ಇಲ್ಲದೇ ಇರುವುದನ್ನು ಹೇಳುವುದು, ಹಾಗೆ ಹೇಳಿರುವುದಿಲ್ಲ, ನಾನು, ಇದ್ದುದ್ದನ್ನು ಹೇಳಿದ್ದೇವೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅವರ ವಿಷಯದಲ್ಲಿ ತಾವು ಒಳ್ಳೆಯ ಮಾತುಗಳನ್ನು ಹೇಳಿದ್ದೀರಿ, ಎಂದು ಹೇಳುತ್ತೇನೆ. ತಾವು ಹೇಳಿರುವುದನ್ನು ನೂರಕ್ಕೆ ನೂರಾಷ್ಟು ನಾನೂ ಒಪ್ಪುತ್ತೇನೆ. ಈ ಕೆಲಸಬಹಳ ಚೆನ್ನಾಗಿ ಅನುಭವವಿರುವ ಎಕ್ಸ್‌ಪರ್ಟ್ ಮಾಡತಕ್ಕದ್ದು. ಇವರು ಮಾಡಿರುವ ಕೆಲಸ ಅತ್ಯುತ್ತಮವೆಂದು ಹೇಳುತ್ತೇನೆ. ಹೀಗಿರುವಾಗ, ಈ ನಿರ್ಣಯದಲ್ಲಿ ಏನು ಸಲಹೆ ಕೊಡುತ್ತಿದ್ದಾರೆಂದರೆ, ಯಾವ ಮಹನೀಯರನ್ನು ಬಹಳ ತಜ್ಞರು ಎಕ್ಸ್‌ಪರ್ಟ್ ಎಂದು ಹೇಳುತ್ತಾರೋ ಅವರ ಮೇಲೆ ಒಂದು ಸಮಿತಿ ಸೇರಿಕೊಂಡು ಪರೀಕ್ಷಣೆ ಮಾಡಬೇಕೆಂದು; ಇದು ಅವಶ್ಯಕವೆ ಎಂದು ನಾನು ಕೇಳುತ್ತೇನೆ. ಅವರನ್ನು ನೇಮಕ ಮಾಡುವ ವಿಚಾರ ಹೇಳುವಾಗ ನಾನು ಒಂದು ಸಮಿತಿಯನ್ನು ನೇಮಕ ಮಾಡುವುದಾಗಿ ಹೇಳಿದೆನೆಂದು ಕೆಲವು ಮಹನೀಯರು ಹೇಳಿದರು. ನಾನು ಆಗ ಹೇಳಿರುವುದು ಇಲ್ಲ ಸ್ಪಷ್ಟವಾಗಿದೆ. ಇನ್ನೊಂದು ಸಮಿತಿಯನ್ನು ನೇಮಕ ಮಾಡುತ್ತೇವೆಂದು ಹೇಳಿಲ್ಲ. ನಾನು ಯಾವಾಗಲೂ ಜಾಗರೂಕತೆಯಿಂದ ವರ್ತಿಸುವವನೆಂಬುದನ್ನು ಜ್ಞಾಪಕದಲ್ಲಿಟ್ಟರೆ ಒಳ್ಳೆಯದು. ಆಗ ಹೇಳಿದ್ದ ಈ ರೀತಿ :—

"Government after consideration feel that the whole problem can be tackled more efficiently by an officer of sufficient status and experience and when the report of such an officer is before the Government, Government could then consider whether the report is to be placed before a committee and their recommendations also taken into account before passing orders."

ಹೀಗೆ ನಾನು ಹೇಳಿರುವುದು, ಇಂತಹ ಅವಶ್ಯಕತೆ ತೋರಿಬಂದರೆ ಆಗ ಒಂದು ಸಮಿತಿಯನ್ನು ಏರ್ಪಾಡು ಮಾಡುವುದನ್ನು ಯೋಚನೆ ಮಾಡುತ್ತೇವೆಂದು ಹೇಳಿದ್ದೇನೆಯೇ ಹೊರತು ಸಮಿತಿಯನ್ನು ಮಾಡುತ್ತೇವೆಂದು ಹೇಳಿಲ್ಲವೆಂಬುವನ್ನು ಜ್ಞಾಪಿಸುತ್ತೇನೆ. ಶ್ರೀಮಾನ್ ಜೆ. ಎ. ಆಚಾರ್ಯರು ಎಕಾನಮಿ ಅಧಿಕಾರಿಗಳವರ ಒಂದೊಂದು ಪುಟವನ್ನೂ ಚೆನ್ನಾಗಿ ಓದಿದ್ದೇನೆ, ಬಹಳ ರಚನಾತ್ಮಕವಾದ ಸಲಹೆಗಳಿವೆ ಎಂದು ಹೇಳಿದರು. ಅದು ನಿಜ. ಹಾಗಿರುವಾಗ ಇವರ ಮೇರೆ ಪುನಃ ಒಂದು ಸಮಿತಿಯನ್ನು ನೇಮಿಸುವುದು ಅವಶ್ಯಕವೆ ಎಂದು ಯೋಚಿಸಬೇಕು.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು.—ಒಂದು ವಿಷಯ ತಿಳಿಯಬೇಕು. ಅವರ ವರದಿ ಇಷ್ಟು ಉತ್ತಮವಾದುದೆಂದು ಕಂಡುಬಂದಿದ್ದರೂ ಅದು ಬಂದಮೇಲೆ ಎಂತು ಬಜೆಟ್‌ಗಳನ್ನು ತಯಾರು ಮಾಡಿದರೂ ಕೂಡ ಸರ್ಕಾರದವರು ಅವರ ಸಲಹೆಯನ್ನು ಏಕೆ ಜಾರಿಗೆ ತರಲಿಲ್ಲ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದಕ್ಕೆ ಉತ್ತರ ಕೊಡುತ್ತೇನೆ. ಅವರ ಸಲಹೆಗಳನ್ನು ಎಷ್ಟು ಮಟ್ಟಿಗೆ ನಾವು ಗಮನದಲ್ಲಿಟ್ಟುಕೊಂಡು ಕೆಲಸಕಾರ್ಯಗಳನ್ನು ಮಾಡುತ್ತಿದ್ದೇವೆಂಬುದನ್ನು ತಿಳಿಸುತ್ತೇನೆ. ಇದಕ್ಕಿಂತಲೂ ಉತ್ತಮವಾದ ಪ್ರಯೋಗವನ್ನು ಹೇಳುತ್ತೇನೆ. ಅವರ ಈ ಸಲಹೆಯನ್ನು ಕಾರ್ಯರೂಪಕ್ಕೆ ತರುವುದು ಕಷ್ಟವೆಂದು ಆಗಲೇ ಹೇಳಿದ್ದೇನೆ. ಅದೇನೆಂದರೆ ಎಸ್ಟಿಮೇಟ್ಸ್ ಸಮಿತಿ ಇದೆ, ಈ ಸಮಿತಿ ಈ ವಿಚಾರವನ್ನೆಲ್ಲಾ ವಿಮರ್ಶೆ ಮಾಡಬಹುದೆಂದು ಇರುವಾಗ, ಆಡಳಿತದ ಮತ್ತು ನಾನಾ ಇಲಾಖೆಗಳ ಕೆಲಸ ಕಾರ್ಯಗಳಲ್ಲಿ ಅನುಭವವಿರುವವರನ್ನು ಈ ಎಸ್ಟಿಮೇಟ್ಸ್ ಸಮಿತಿಗೆ ಚುನಾಯಿಸಿರುವಾಗ ಇದರ ಮೇರೆ ಇನ್ನೊಂದು ಸಮಿತಿಯನ್ನು ಹಾಕಿದರೆ ಎಷ್ಟು ಚೆನ್ನಾಗಿರುತ್ತದೆಯೋ ಯೋಚಿಸಿ. ಅಲ್ಲದೆ ಇದು ಸರ್ಕಾರದವರು ನೇಮಿಸುವ ಅಡ್‌ಹಾಕ್ ಸಮಿತಿ. ಇದಕ್ಕೆ ಸರ್ಕಾರದವರು ಸದಸ್ಯರನ್ನು ನೇಮಿಸುವುದು; ತಮಗೆ ಬೇಕಾದವರನ್ನು ನೇಮಿಸಿಕೊಂಡರೆಂದು ಆಕ್ಷೇಪಣೆ ಮಾಡುವ ಮಹನೀಯರೂ ಇದ್ದಾರೆ. ಈ ಸಮಿತಿಯವರು ಒಂದು ವಿಧವಾದ ವರದಿಕೊಡುವುದು, ಈ ಸಭೆಯಿಂದ ನೇಮಕವಾಗಿ ಚುನಾಯಿತ ಸದಸ್ಯರನ್ನೊಳಗೊಂಡ ಎಸ್ಟಿಮೇಟ್ಸ್ ಸಮಿತಿಯವರು ಒಂದು ವಿಧವಾದ ಶಿಫಾರಸುಗಳನ್ನು ಕೊಡುವುದು, ಹೀಗಾದರೆ ಯಾವುದನ್ನು ತೆಗೆದ ಕೊಳ್ಳುವುದು, ಯಾವುದನ್ನು ಬಿಡುವುದು? It will be utter confusion. ಶ್ರೀಮಾನ್ ವೀರಣ್ಣಗೌಡರು ಹೇಳಿದಹಾಗೆ ಈ ನಿರ್ಣಯವನ್ನು ಸೂಚಕರು ಕಳುಹಿಸಿದಾಗ ಎಸ್ಟಿಮೇಟ್ಸ್ ಸಮಿತಿ ಆಗುತ್ತದೆಯೋ ಇಲ್ಲವೋ ಎಂದು ಅವರಿಗೆ ಗೊತ್ತಿರಲಿಲ್ಲ, ಅದರಿಂದ ಕಳುಹಿಸಿರಬಹುದೆಂದು ಹೇಳಿದರು. ಇದು ನಿಜ, ಹಾಗೆಯೇ ಇರಬಹುದೆಂದು ತೋರುತ್ತದೆ ಎಸ್ಟಿಮೇಟ್ಸ್ ಸಮಿತಿಯ ಕಾರ್ಯವ್ಯಾಪ್ತಿಯ ವಿಚಾರ ತಿಳಿಯುವುದು ಅವಶ್ಯಕ.

ಈಗ ಎಸ್ಟಿಮೇಟ್ಸ್ ಸಮಿತಿ ವಿಚಾರದಲ್ಲಿ ಅದು ಯಾವ ರೀತಿ ಕೆಲಸ ಮಾಡುತ್ತದೆ ಎಂಬುದನ್ನು ತಿಳಿದುಕೊಳ್ಳುವುದು ಒಳ್ಳೆಯದು. ಎಸ್ಟಿಮೇಟ್ಸ್ ಸಮಿತಿಯನ್ನು ನಿಯಮಿಸಿದಾಗ ಕೇಂದ್ರ ಪಾರ್ಲಿಮೆಂಟಿನಲ್ಲಿ ಡಾ|| ಜಾನ್‌ಮಥಾಯ್‌ರವರು ಹೇಳಿರತಕ್ಕ ಎರಡು ವಾಕ್ಯಗಳನ್ನು ಸಭೆಯ ಗಮನಕ್ಕೆ ತರುತ್ತೇನೆ. ಇದು ಬಹಳ ಮುಖ್ಯವಾದ ವಿಚಾರ. ಪ್ರತಿಯೊಂದು ಶಬ್ದವನ್ನೂ ಕೂಡ ದಯವಿಟ್ಟು ಗಮನಿಸಬೇಕು.

"I look upon the Estimates Committee as one which is going to be an Economy Committee sitting so to speak continuously. But there is a further difference between the Estimates Committee and the ad *hoc* Economy Committee that we had appointed a little more than a year ago .....This Estimates Committee is appointed by Parliament and it is responsible to Parliament under the general direction of the Speaker ....You may say that the expenditure proposed under so and so item is on the high side and that you think that Government would be able to fulfil its policy and objectives within a smaller amount. That would be the line on which you can send your recommendations to Parliament. When Government get that report they would accept recommendations of the Committee not in toto, but as guidance when they come to formal proposals for 51-52. There is an obligation on Government to give the fullest possible weight to the recommendations of the Committee. From Government's point of view, the report of this Committee is a yard stick by which Parliament can judge the expenditure proposed by Government. At present we have not got a real yard stick."

ಆದ್ದರಿಂದ ನಾನು ಹೇಳುವುದು ಇಷ್ಟೆ. ಈಗ ನಾವು ಹೊಸ ಹೊಸ ಸಂಪ್ರದಾಯಗಳನ್ನು ಬೆಳೆಸುತ್ತಾ ಇದ್ದೇವೆ. ಆದ್ದರಿಂದ ಬಹಳ ಜಾಗರೂಕತೆಯಿಂದ

(ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.)

ವರ್ತಿಸುವಂಥ . ಶಾಸನ ಸಭೆಯಿಂದ ಮಿನಾಯಿಸಿರತಕ್ಕ ಎಸ್ಟಿಮೇಟ್ಸ್ ಸಮಿತಿ ಇರುವಾಗ ಯಾವುದೋ ಒಂದು ಅಡ್‌ಹಾಕ್ ಸಮಿತಿ ಮಾಡಿಕೊಂಡರೆ—ನಾನೇನೋ ಅದನ್ನು ಆಲೋಚಿಸುವುದಕ್ಕೆ ಸಿದ್ಧವಾಗಿರಬಹುದು, ಬೇಕಾಗಿಲ್ಲ ಎಂದು ಹೇಳುವುದಿಲ್ಲ, ಆದರಿಂದ ಸ್ಯಾರಕ್ಕೆ ಒಳ್ಳೆಯದಿದ್ದರೂ ಇರಬಹುದು—ವ್ಯತ್ಯಾಸವಾಗುತ್ತದೆ. ಅದ್ಕರಿಂದ ಸರಿಯಾದ ಸಂಪ್ರದಾಯವನ್ನೂ ಸ್ಥಾಪಿಸಬೇಕೆಂದು ತಮ್ಮನ್ನು ಕೇಳಿಕೊಳ್ಳತ್ತೇನೆ. ಮತ್ತೆ ದಯವಿಟ್ಟು ಇದನ್ನು ಅಪ್ಪ ಒತ್ತಾಯಪೂರ್ವಕ ಬೇಡಿಕೆಯಂತೂ ವಿನಯಪೂರ್ವಕ ಮತ್ತೊಮ್ಮೆ ಪ್ರಾರ್ಥಿಸುತ್ತೇನೆ.

Sri H. B. GUNDAPPA GOWDA.—According to the work of the Estimates Committee, it is to scrutinise the expenditure and suggest retrenchments and other things. But what about augmentation of revenues?

The Hon'ble Sri H. C. DASAPPA.—I will not omit to answer any of the important points raised.

ಶ್ರೀ ಗುಂಡಪ್ಪಗೌಡರು ಕೇಳುವುದು ನ್ಯಾಯವಾಗಿದೆ. ಎಸ್ಟಿಮೇಟ್ಸ್ ಸಮಿತಿ augment ಮಾಡತಕ್ಕ ವಿಚಾರ ಅವರು ಸ್ಪಷ್ಟವಾಗಿ ವಿಧಿಸಿಲ್ಲ. ಕಾರಣ ಇಷ್ಟೆ. ಗುಂಡಪ್ಪಗೌಡರು ಮತ್ತು ಇತರರು ಸರ್ಕಾರದಲ್ಲಿ ಮಂತ್ರಿಗಳಾಗಿ ಕೆಲಸಮಾಡಿದ್ದಾರೆ. ಅವರಿಗೆ ಗೊತ್ತಿದೆ. ತೆರಿಗೆಗಳನ್ನು ವಿಧಿಸಕ್ಕೆ ವಿಚಾರದಲ್ಲಿ ಸರ್ಕಾರದ ಜವಾಬ್ದಾರಿ ಹೆಚ್ಚಾಗಿರುತ್ತದೆ. ಅದೆಲ್ಲವನ್ನೂ ಒಂದು ಸಮಿತಿ ಬೆಟ್ಟದಂಗವಾಗಿ ಏರ್ಪಾಡಿ ತೆರಿಗೆಗಳನ್ನು ಹಾಸ್ತಿ ಮಾಡಿ. ಎಂದು ಶಿಫಾರಸು ಮಾಡುತ್ತಾರೆ ಎಂದರೆ ಅದು ಸಂಪ್ರದಾಯಕ್ಕೂ ಮತ್ತು ಆರ್ಥಿಕ ವ್ಯವಸ್ಥೆಯ ನೀತಿಗೂ ತೀರ ವಿರೋಧವಾಗುತ್ತದೆ. ಸಾಮಾನ್ಯವಾಗಿ ಹೇಳಬಹುದೇ ಹೊರತು ಸ್ಪಷ್ಟವಾಗಿ ಇಂಥಾ ಒಂದು ಸಮಿತಿಯನ್ನು ಮಾಡಿ ಎಂದು ಹೇಳಿ ಸರ್ಕಾರದ ಮೇಲೆ ಒತ್ತಾಯಪಡಿಸತಕ್ಕದ್ದು ಸರಿಯಲ್ಲ ಎಂದು ನನಗೆ ತೋರುತ್ತದೆ. ಮಾನ್ಯ ಸದಸ್ಯರು ಯಾವುದಾದರೂ ಒಂದು ರೀತಿಯಲ್ಲಿ ಅವರು ಮಾಡತಕ್ಕ ಶಿಫಾರಸನ್ನು ಸರ್ಕಾರದವರು ಅಂಗೀಕಾರ ಮಾಡಬಹುದು ಎಂದು ಸೂಚಿಸಿದರು. ಅದನ್ನು ನಾನು ಒಪ್ಪುವುದಿಲ್ಲ. ನಾವು ಯಾವುದೇ ಒಂದು ಸಮಿತಿ ನೇಮಕ ಮಾಡಿದರೂ ಕೂಡ ಅವರು ಮಾಡತಕ್ಕ ಶಿಫಾರಸ್ಸಿಗೆ ಬೆಲೆ ಕೊಡಬೇಕು. ಆ ಸಂಪ್ರದಾಯ ಒಳ್ಳೆಯದು. ಆದ್ದರಿಂದ ನಾವು ಆ ವಿಷಯದಲ್ಲಿ ಜಾಗರೂಕತೆಯಿಂದ ಇರಬೇಕು. ಅದ್ಕರಿಂದ augmentation ವಿಚಾರದಲ್ಲಿ ನೇರವಾದ ಜವಾಬ್ದಾರಿ ಯಾವಾಗಲೂ ಕೂಡ the responsibility is not of the Government alone but of the Finance Minister himself. In fact I must tell the Hon'ble Members that a tradition has been established that possibly the colleagues may or may not know what is in the back of the Finance Minister. ಹೀಗೆ ಇರುವಾಗ ನಾವು ಒಳ್ಳೆಯ ಸಂಪ್ರದಾಯಗಳನ್ನು ಅನುಸರಿಸುವುದು ಉತ್ತಮವೆಂದು ಹೇಳುತ್ತೇನೆ. ಮತ್ತು ಆ ರೀತಿ ಕಾರ್ಯಕ್ಷಮತೆಯುಳ್ಳ ಆಗಿ ಸಾಮರ್ಥ್ಯ ಪಡೆದುಕೊಳ್ಳುವುದಕ್ಕೆ ಈಗ ಯಾವ ಪ್ರತಿಬಂಧಕವೂ ಇರಲಾರದು ಇದನ್ನು ಕಾರ್ಯರೂಪಕ್ಕೆ ತರಬೇಕು ಎಂದು ಹೇಳಿ ನಾನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಇನ್ನು ಉಳಿದ ವಿಷಯಕ್ಕೆ ಬಹುಶಃ ಒಂದು ವಿವರ ಅವಶ್ಯವಾದೀತೆಂದರೆ.....

ಶ್ರೀ ಎಚ್. ಬಿ. ಗುಂಡಪ್ಪಗೌಡರು.—Augmentation ವಿಚಾರದಲ್ಲಿ ನೀವು ಹೇಳಿದ್ದು ಸ್ವಲ್ಪ ಅರ್ಥವಾಗಲಿಲ್ಲ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದು ಎಸ್ಟಿಮೇಟ್ಸ್ ಸಮಿತಿಯ ಕರ್ತವ್ಯ ಎಂದು ಅಲ್ಲಿ ಹೇಳಿದೆ. ಶ್ರೀ ಚಂದ್ರಶೇಖರಯ್ಯನವರು ತಂದಿರತಕ್ಕ ಸ್ವರೂಪದಲ್ಲಿ ಈ ನಿರ್ಣಯವನ್ನು ಅಂಗೀಕಾರಮಾಡುವುದು ಸಾಧ್ಯ ಎಂಬುದನ್ನು ನಮೂದಿಸುತ್ತಾ ಇದ್ದೇನೆ.

Sri H. B. GUNDAPPA GOWDA.—The resolution contemplates the appointment of a committee. With what object? With two objects: to consider and send proposals; but they are not binding on the Government. So far as the Estimates Committee is concerned, they have got some sort of limited power; it is more than the ordinary committee appointed for other business. For augmentation of revenues, what will the Government do? Are they going to appoint another committee?

The Hon'ble Sri H. C. DASAPPA.—I cannot tell that I am going to appoint a committee for getting taxation proposals.

Sri H. B. GUNDAPPA GOWDA.—Then what is the source?

The Hon'ble Sri H. C. DASAPPA.—The responsibility primarily rests on the Government and the Finance Minister. There is no doubt about that. I do not want the matter to be left vague. I have made it amply clear that it is the responsibility of the Government and especially of the Finance Minister to find ways and means for the expenditure that is equired for the year.

Sri H. B. GUNDAPPA GOWDA.—Therefore we know where we stand.

The Hon'ble Sri H. C. DASAPPA.—There is no doubt about it. As I say there is nothing to prevent the Government from confidentially consulting anybody they choose in this matter. I will indicate just now how, without affecting the secrecy that should subsist so far as the taxation proposals are concerned, to make it possible.

Janab J. MOHAMED IMAM.—To avoid taxation and fresh measures of taxation I think that he has suggested this Committee.

The Hon'ble Sri H. C. DASAPPA.— It is open to the Legislature to do what they like. But the point is this. It has been stated by some Hon'ble Members that the Economy Officer's report has not been given due weight and consideration by Government. Nothing else is farther from the truth and I do not want that expression to exist. Every bit of his recommendation is being examined by each department separately and recommendations are coming to Government from time to time. I would briefly indicate as to what we have been able to do with the recommendations of the Economy Officer. Take for instance, the question with regard to land revenue. The Economy Officer has suggested the levy of surcharge to the extent of, I think, 33 1/3 per cent which brings a return of about 51 lakhs of rupees to the treasury. This question has to be considered along with the report of the Sri H. B. Gundappa Gowda Committee where they have also made a like suggestion.

Sri H. B. GUNDAPPA GOWDA.— Not to that extent.

The Hon'ble Sri H. C. DASAPPA.— Quite so, but what I say is, this is a matter which the Government are actively considering and therefore there is no doubt about the fact that this recommendation of the Economy Officer is before their mind. He has suggested something about income-tax, a short rise of ten lakhs of rupees, but it has gone to the Centre. Then I have already told you how we would be getting much more than this because of the Gold duty abolition that would show better results than the income-tax is concerned. That is to the tune of nearly 40 lakhs. Then he has suggested the augmentation of return from the sales-tax. We are already taking steps, and 79 lakhs or so were the result of our action in of 48-49. For 49-50 we had a certain target which we reached and this year we hope to reach not only the target but something more; how much more I could not say because we have got to receive three months accounts. Therefore, the idea which the Economy Officer had, we are just pursuing. Then, take the instance of betting tax, he suggested a certain increase. We have adopted it. We have adopted in such a fashion that Sri H. B. Gundappa Gowda was furious for having increased the betting tax We raised it to 25 per cent. It appears it had such an adverse effect on the receipts in the race course that we had to again scale it down to 17½ per cent.

Sri H. B. GUNDAPPA GOWDA.— I think you will have to go down further.

The Hon'ble Sri H. C. DASAPPA.— This is a sample as to how the Economy Officer's recommendations could be implemented Am I to implement the entire recommendation of the Economy Officer or am I to throw a search light on the practicality and go for a realistic report ? Sri H. B. Gundappa Gowda has furnished me a very fine argument to show that we should not simply accept whatever the Economy Officer has recommended, and whenever it is practicable and helpful, we must accept the recommendations. I thank the Hon'ble Member Sri H. B. Gundappa Gowda. He has also suggested that a cess must be levied on all taxes. It is obvious that we cannot levy health cess on income-tax. But all the same this question is under the active consideration of the Government. We are just on the point whether we should levy the cess or not. Then, with regard to electricity the Economy Officer has recommended surcharge, which has been accepted. Is it a sin for us for accepting so many recommendations of the Economy Officer ? Yet, Hon'ble Members are saying that we have not accepted his recommendations ! He suggests a certain higher rate from Jog Electric Works. We are not able to realise this because we have yet to distribute power and then we can realise. 25 lakhs of rupees. Much more than the suggestion of the Economy Officer with regard to surcharge, we have increased the charge of heating circuit I wonder whether anybody could have done better and more. He has taken about 101 lakhs of rupees from the Iron Works; but as I have told you yesterday, they have still to go into production. As soon as the big electrical pig-iron furnace goes into production we

(THE HON'BLE SRI H. C. DASAPPA.)

would not only get ten lakhs but very much more. I may go on like this. But I have taken only a few instances to indicate that the Government are very serious about implementing the recommendations of the Economy Officer and explore further avenues. So, I would say so far as retrenchment is concerned, please leave it to the Estimates Committee. Do not take the wings of the Estimate Committee; do not render the Estimates Committee an ineffective body. I think with this assurance, namely, that the Government are ever keen on this point, my Hon'ble friend Sri D. H. Chandrasekharaiya will withdraw his resolution After all I am thankful to him for the reply that he has made. I know Sri Chandrasekharaiya very well.

(Laughter)

Sri L. SIDDAPPA.—As if we do not know him!

The Hon'ble Sri H. C. DASAPPA.—.....and in the reply he said that he was for the spirit of the resolution to be accepted and that he was not a stickler.

Sri D. H. CHANDRASEKHARAIYA—If the object of the resolution could be accomplished through any agency I shall be happy. I want the results to be reflected in the next Budget.

Mr. SPEAKER.—The Hon'ble Member cannot make any speech now.

Sri D.H. CHANDRASEKHARAIYA.—In view of the remarks, I do not want to press the resolution. I seek the permission of the House to withdraw it.

The resolution was, by leave of the House, withdrawn.

ಅಧ್ಯಕ್ಷರು.—ಈಗ ಶ್ರೀ ವಾಕ್ ಬಿ. ಎಚ್. ಬೋರಣ್ಣ ಗೌಡರು ತಮ್ಮ ನಿರ್ಣಯವನ್ನು ಮಂಡಿಸಬಹುದು.

RESOLUTION No. 2

Plea for the Introduction of Prohibition in Hassan District from 1951-52.

ಶ್ರೀ ಬಿ. ಎಚ್. ಬೋರಣ್ಣಗೌಡರು (ಹಾಸನ ಜಿಲ್ಲೆ)—ಸ್ವಾಮಿ ನನ್ನ ನಿರ್ಣಯವು ಈ ರೀತಿಯಾಗಿದೆ :—

"This Assembly is of the opinion that prohibition be introduced in the Hassan District from the year 1951-52"

ಸ್ವಾಮಿ, ಈ ನಿರ್ಣಯವನ್ನು ಸಮರ್ಥಿಸುತ್ತ ಕೆಲವು ವಿಷಯಗಳನ್ನು ನಾನು ಸಭೆಯ ಮುಂದಿಡಲು ಇಚ್ಛಿಸುತ್ತೇನೆ. ಮೈಸೂರು ಸರ್ಕಾರದವರು ಈಗಾಗಲೇ 5 ಜಿಲ್ಲೆಗಳಲ್ಲಿ ಪಾನನಿರೋಧವನ್ನು ಜಾರಿಗೆ ತಂದಿದ್ದಾರೆ. ಇನ್ನೂ 4 ಜಿಲ್ಲೆಗಳಲ್ಲಿ ಜಾರಿ ಮಾಡಬೇಕಾಗಿದೆ. ಹೀಗೆ ಪಾನನಿರೋಧವನ್ನು ಜಾರಿಗೆ ತಂದಿಲ್ಲವ ಜಿಲ್ಲೆಗಳ ಪೈಕಿ ಹಾಸನ ಜಿಲ್ಲೆಯೂ ಒಂದಾಗಿದೆ. ಇದು ಒಂದು ಕಡೆ ಮಂಗಳೂರು ಮತ್ತೊಂದು ಕಡೆ, ಚಿತ್ರದುರ್ಗ ಇನ್ನೊಂದು ಕಡೆ ತುಮಕೂರು ಈ ಪ್ರದೇಶಗಳ ಮಧ್ಯದಲ್ಲಿದ್ದು, ಈ ನುತ್ತಲೂ ಇರುವ ಜಿಲ್ಲೆಗಳಲ್ಲಿ ಪಾನನಿರೋಧವನ್ನು ಜಾರಿಗೆ ತರಲಾಗಿದೆ. ಆದರೆ ಈ ಸಂದರ್ಭದಲ್ಲಿ ಒಂದಂಶವನ್ನೇ ಈ ಹಾಸನ ಜಿಲ್ಲೆಯ ಪರವಾಗಿ ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಕುಡಿತದ ಹಾವಳಿ ಹಾಸನ ಜಿಲ್ಲೆಯಲ್ಲಿ ಬಹಳ ಹಾಸ್ಯಾಸ್ಪದವಾಗಿರುತ್ತೆಂಬ ಅಂಶ ಮಾನ್ಯ ಸಚಿವರ ಗಮನಕ್ಕೆ ಮೊನ್ನೆ ತಾನೆ ಅವರು ಸಂಚಾರಾರ್ಥವಾಗಿ ನಮ್ಮ ಜಿಲ್ಲೆಗೆ ಬಂದಿದ್ದಾಗ್ಯೆ ಪ್ರತ್ಯಕ್ಷವಾಗಿ ತೋರಿಸಿದ್ದೇನೆ. ಇಷ್ಟೆಲ್ಲಾ ಮಾಡಿದ್ದಾಗ್ಯೂ ಇನ್ನೂ ಹಾಸನ ಜಿಲ್ಲೆಯಲ್ಲಿ ಈ ಪಾನನಿರೋಧವನ್ನು ಜಾರಿಗೆ ತರದಿರುವುದು ತುಂಬಾ ಅತ್ಯಪ್ತಿಕರವಾದ ಅಂಶ ಎನ್ನುವುದನ್ನು ಅವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಕಳೆದ ಎರಡು ವರ್ಷಗಳಿಂದಲೂ ಈ ವಿಚಾರವಾಗಿ ನಾನು ಸರ್ಕಾರದವರನ್ನು ಪ್ರಶ್ನಾವಳಿಗಳ ಮೂಲಕವೂ, ನಿರ್ಣಯ, ಅರಿಕೆ ಇತ್ಯಾದಿಗಳ ಮೂಲಕವಾಗಿ ಎಷ್ಟೋ ಪ್ರಾರ್ಥನೆ ಮಾಡಿಕೊಂಡಿದ್ದಾಗ್ಯೂ ಇನ್ನೂ ಆಲೋಚನೆ ಮಾಡುತ್ತೇವೆಂದು ಹೇಳುವುದರಲ್ಲೇ ಇದ್ದಾರೆ. ಹಿಂದೆ ಇದೇ ಮಾನ್ಯ ಸಭೆಯಲ್ಲಿ ಸೇಲ್ಸ್ ಟ್ಯಾಕ್ಸ್ ವಿಚಾರ ಚರ್ಚೆಯಾಗುತ್ತಿದ್ದಾಗ, ನನ್ನ ಅಭಿಪ್ರಾಯವನ್ನು ನಾನು ಆಗ ಈ ಟ್ಯಾಕ್ಸ್‌ನ್ನು ಹಾಕಬಹುದೆಂದೂ, ಅದರಿಂದ ಬರತಕ್ಕ ಉತ್ಪತ್ತಿಯನ್ನು ಈ ಪಾನನಿರೋಧದ ಬಗ್ಗೆ ಸಂಭವಿಸಬಹುದಾದ ಜೋತಾ ಹಣವನ್ನು ಭರ್ತಿ ಮಾಡಿಕೊಳ್ಳಲು ಅನುಕೂಲವಾಗುತ್ತದೆಂದು ಹೇಳಿ ಆಗ ಒಪ್ಪಿಗೆ ಕೊಟ್ಟೆನು. ಅದೇ ರೀತಿ ಅನೇಕ ಮಾನ್ಯ ಸದಸ್ಯರೂ ತಮ್ಮ ಅಭಿಪ್ರಾಯಗಳನ್ನು ಅಂದು ವ್ಯಕ್ತ ಪಡಿಸಿದರು. ಈ ಒಂದು ಅಂಶವನ್ನೇ ಮಾನ್ಯ ಹಣಕಾಸಿನ ಮಂತ್ರಿಗಳೂ ಅಂದು ಪ್ರತಿಪಾದಿಸಿದ್ದರು. ಆದರೆ ಈಗಾಗಲೇ ಈ ಸುಂಕ ಜಾರಿಗೆ ಬಂದು ಅದರಿಂದ ಸರ್ಕಾರಕ್ಕೆ ಬೇಕಾದಷ್ಟು ಹಣ ಉತ್ಪತ್ತಿಯಾಗುತ್ತಿದೆ. ಆದರೆ ಸರ್ಕಾರದವರು ತಿಳಿಸಿದ್ದ ಅವರ ಪಾಲಿಸಿಯನ್ನು ಇದುವರೆಗೂ ಅವರು ಮುಂದುವರಿಸಿಲ್ಲ. ಇದು ಬಹಳ ವಿಷಾದಕರವಾದ ಸಂಗತಿಯೆಂದು ಹೇಳಿದರೆ ತಾವು ನನ್ನನ್ನು ಕ್ಷಮಿಸುತ್ತೀರೆಂದು ನಂಬಿದ್ದೇನೆ. ಆದರೆ ಈಗ ನಾವು ಪದೇ ಪದೇ ಈ ವಿಚಾರವನ್ನು ಒತ್ತಾಯ ಮಾಡುತ್ತಿರುವ ಬಗ್ಯೆ ಸರ್ಕಾರದವರು ತಮ್ಮ ಹಣಕಾಸಿನ ಪರಿಸ್ಥಿತಿ ಬಹಳ ಬಿಗಡಾಯಿಸಿದೆ, ಆದ್ದರಿಂದ ಅದನ್ನು ಜಾರಿಗೆ ತರರಾಗಲಲ್ಲವೆಂದು ಹೇಳುತ್ತಿದ್ದಾರೆ. ಈ ಒಂದು ಅಭಿಪ್ರಾಯಕ್ಕಾಗಿಯೇ ಮಾನ್ಯ ಶ್ರೀ ಎಲ್. ಸಿದ್ದಪ್ಪನವರು ಆಗ ತಾವು ಪಾನನಿರೋಧವನ್ನು ಜಾರಿಗೆ ತಂದಿರುವ ನೆಳದಲ್ಲಿ ಕಡ ಅದನ್ನು ತೆಗೆದು ಹಾಕಿಬಿಡಿ ಎಂದು ಸಲಹೆಯನ್ನು ಅವಕಾಶವಾಯಿತು.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ನಾನು ಆ ರೀತಿಯಾಗಿ ಹೇಳಲಿಲ್ಲ. ತಮಗೆ ಇದನ್ನು ನಿರ್ವಹಿಸುವುದಕ್ಕೆ ಶಕ್ತಿ ಇಲ್ಲದಿದ್ದರೆ, ಅಥವಾ ಯೋಗ್ಯತೆಯಿಲ್ಲದಿದ್ದರೆ, ಅದು ಬೇರೆ ಸ್ಥಾನಕ್ಕೆ ಬರತಕ್ಕ ಉತ್ಪತ್ತಿಯನ್ನಾದರೂ ಪಡೆದುಕೊಳ್ಳುತ್ತಿದ್ದೀರಿ ಎಂದು ಹೇಳಿದ್ದೇನೇ ಹೊರತು ಹಾಗೆ ಹೇಳಲಿಲ್ಲ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು (ಆರ್ಥಿಕ ಮತ್ತು ಕೈಗಾರಿಕಾ ಸಚಿವರು).—ಆ 'ಯೋಗ್ಯತೆ' ಎಂಬ ಪದವನ್ನು ಬಿಟ್ಟು ತಾವು ಮತ್ತೊಂದು ಪದವನ್ನೇ ಉಪಯೋಗಿಸಬಾರದೆಂದಿರುವಂತೆ ತೋರುತ್ತಿದೆ. ಉಪಯೋಗಿಸಲು ಏನಯವಾದ ಪದಗಳು ತಮಗೆ ಮತ್ತೆ ಬೇರೆ ಇಲ್ಲವೇನು? Are there not more pleasant words for the opposite side to use?

ಶ್ರೀ ಎಲ್. ಸಿದ್ದಪ್ಪನವರು.—ಇರತಕ್ಕ ವಿಚಾರವನ್ನು ಹೇಳಿದ್ದೇನೆ ಅಷ್ಟೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ತಾವು ಒಂದು ವೇಳೆ ಇದನ್ನು ನಿಲ್ಲಿಸದಿದ್ದರೆ ನಮ್ಮ ಹಾಸನದ ಪರಿಸ್ಥಿತಿ ಬಹಳ ಕಷ್ಟಕ್ಕೆ ಬರುತ್ತದೆಂಬುದು ಎಲ್ಲರಿಗೂ ಗೊತ್ತಿರತಕ್ಕ ಅಂಶ. ಈ ಕಳೆದೆರಡು ವರ್ಷಗಳಲ್ಲಿ ಒಂದೊಂದು ಹೆಂಡದಂಗಡಿಯ ಸಂಪಾದನೆಯೂ ಒಂದಕ್ಕೆ 5 ರಷ್ಟು 6 ರಷ್ಟು ಹೆಚ್ಚಿ ಹೋಗಿದೆ. ಹೀಗಾಗಿ ಅವರ ಸಂಪಾದನೆ ಮೊದಲು ಪಾನ ಮಾಡತಕ್ಕ ಪದ್ಧತಿ ಜಾರಿಲಿದ್ದಾಗ ಬರುತ್ತಿದ್ದ ಸಂಪಾದನೆಗಿಂತಲೂ ಈ ಪಾನ ನಿರೋಧ ಪದ್ಧತಿ ಜಾರಿಗೆ ಬಂದನಂತರ ವಿಪರೀತವಾಗಿ ಹೆಚ್ಚಿ ಹೋಗಿದೆ. ಹೀಗಾಗುವುದಕ್ಕೆ ಕಾರಣವಾದರೂ ಇಷ್ಟೆ. ಅಕ್ಕಪಕ್ಕದ ಜಿಲ್ಲೆಗಳಲ್ಲೆಲ್ಲಾ ಈ ಪಾನ ನಿರೋಧ ಜಾರಿಗೆ ಬಂದಿದೆ, ಆ ಕಾರಣ ಆ ಕುಡಿತ ತಪ್ಪಿಸಿರತಕ್ಕ ಜಾಗಗಳಿಗೆಲ್ಲಾ ಈ ಹೆಂಡವನ್ನೇ ಇಲ್ಲಿಂದ ರವಾನೆ ಮಾಡಿ, ಹೆಚ್ಚು ಹಣ ಸಂಪಾದಿಸಲು ಅವಕಾಶವಾಯಿತು. ಈ ಜಿಲ್ಲೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಹೆಸರಿಗೆ ಮಾತ್ರ ಈ ಪಾನನಿರೋಧ ಜಾರೀಲಿದ್ದೆಯೇ ಏನಾ ವನ್ನುತಃ ಅದು ಜಾರಿಗೆ ಬಂದೇ ಇಲ್ಲ. ಮಂಗಳೂರು, ಚಿಕ್ಕಮಗಳೂರು, ಚಿತ್ರದುರ್ಗ, ಮತ್ತು ತುಮಕೂರಿನ ಕೆಲ ಕೆಲವು ಭಾಗಗಳಲ್ಲಿ ಹಗಲೂ ರಾತ್ರಿ ಈ ಪಾನದ ವ್ಯವಹಾರ ಹೇಳತೀರದಾಗಿದೆ. ಅವರಿಗೆ ಅಲ್ಲಿ ತುಂಬಾ ಕಾಟವಾಗಿದೆ. ಅಂತೂ ಕಂಟ್ರಾಕ್ಟರುಗಳು ಈಗ ಚೆನ್ನಾಗಿ ಬಡಕಾಯಿಸಿದ್ದಾರೆ. ಆದರೆ ಸರ್ಕಾರದವರು ಒಂದಾವರ್ತಿ ಎತ್ತಿ ಹಿಡಿದ ಪಾಲಸಿಯನ್ನು ಅವರು ಮರೆಯಬಾರದು; ಅವರು ಯಾವಾಗಲೂ ಅದನ್ನೇ ಮುಂದುವರಿಸಲು ಪ್ರಯತ್ನಿಸಬೇಕು. ಆದರೆ ಹಣ ಸಂಪಾದಿಸಲಿಕ್ಕೆ ಸರ್ಕಾರಕ್ಕೆ ಬೇಕಾದಷ್ಟು ಮಾರ್ಗಗಳೂ ಮತ್ತು ನೀತಿನೀತಿಗಳೂ ಇವೆ. ಅಂಥಾ ಮಾರ್ಗಗಳಲ್ಲಿ ಈ ಬಾಬೂ ಒಂದಾಗಿದೆ. ಆದರೆ ನಾವು ಒಂದಾವರ್ತಿ ಇಂಥಾ ಬಾಬುನಿಂದ ಹಣ ಸಂಪಾದಿಸುವುದು ಬಹಳ ತುಚ್ಛವಾದ್ದೆಂದು ತೀರ್ಮಾನ ಮಾಡಿಬಿಟ್ಟಿರುವುದರಿಂದ, ಇದರ ಬಗ್ಗೆ ಸಂಪಾದನೆ ಎಷ್ಟೇ ಬರಲಿ ಅಥವಾ ಬಾರದೆ ಲುಕ್ಸಾನಾಗಲೀ ಅದಕ್ಕೆ ತಾವು ಗಮನ ಕೊಡಬಾರದು. ಹೀಗೆ ಯಾರೇ ಆಗಲೀ ಒಂದಾವರ್ತಿ ಒಂದು ನೀತಿಗೆ ಕಟ್ಟುಬಿದ್ದಮೇಲೆ ಅದನ್ನು ಬದಲಾಯಿಸಬಾರದು. ಈ ಒಂದು ನೀತಿಗೆ ಕಟ್ಟುಬಿದ್ದೇ ನಾವು ಮೊದಲು ಸರ್ಕಾರದವರು ತಂದಿದ್ದ ತೆರಿಗೆ ವಸೂಲಿಗೆ ಬೆಂಬಲ ನೀಡಿದೆವು.—ಹೀಗೆ ನಾನು ಇದೇ ವಿಚಾರವನ್ನು ನಿರ್ಣಯ ರೂಪದಲ್ಲಿ ಈ ಸಭೆಯ ಮುಂದೆ ತಂದಿದ್ದ ಕಾಲದಲ್ಲಿ ಸರ್ಕಾರದವರು ಅವರ ಹಣಕಾಸಿನ ಪರಿಸ್ಥಿತಿ ತೀರಾ ಹದಗೆಟ್ಟಿರುತ್ತೆಂದು ಹೇಳಿದ ಪ್ರಯುಕ್ತ ಆಗ್ಯೆನ್ನು ನಿರ್ಣಯವನ್ನು ನಾನು ಒತ್ತಾಯಪಡಿಸದೆ ವಾಪಸ್ಸು ತಗೆದುಕೊಳ್ಳಬೇಕಾಯಿತು. ಆದರೆ ದೇಶದ ಪರಿಸ್ಥಿತಿ ಹೇಗಿದೆಯೆಂಬುದನ್ನು ಸರ್ವರೂ ತಿಳಿದಂಥಾವರೇ ಆಗಿದ್ದಾರೆ. ಆದರೆ ನಮ್ಮ ಸರ್ಕಾರ ಮೊದಲು ಏನೊ ದು ಈ ಸಂಬಂಧವಲ್ಲಿ ವಾಗ್ದಾನ ಮಾಡಿಕ್ಕೋ ಅದನ್ನೇ ಇನ್ನು ನಡೆಸದೆ ಕೈಬಿಟ್ಟಿರುವುದರಿಂದ ನಮ್ಮ ಎದುರು ಪಕ್ಷದ ಮಿತ್ರರು ನಮ್ಮನ್ನು ನೋಡಿ ನಗಲಕ್ಕೆ ಇದು ಕಾರಣವಾಗಿರುತ್ತೆ. ಹಣಕಾಸಿನ ಪರಿಸ್ಥಿತಿ ಹದಗೆಟ್ಟಿದ್ದರೆ ಅದನ್ನು ಸರಿ ಮಾಡಿಸೋಣ. ಆದರೆ ತಾವು ತಮ್ಮ ಪಾಲಸಿಯನ್ನು ಖಂಡಿತ ಸಡಿಲ ಮಾಡಬಾರದೆಂದು ಹೇಳುತ್ತೇನೆ. ಆದರೆ ಕೆಲವು ಮಾನ್ಯ ಸದಸ್ಯರು 5 ಜಿಲ್ಲೆಗಳಲ್ಲಿ ಪಾನ ನಿರೋಧ ಜಾರಿಗೆ ಬಂದಿದ್ದಾಗ್ಯೂ ಇನ್ನೂ ಅರ್ಧದಷ್ಟು ಸಂಸ್ಥಾನದಲ್ಲಿ ಇದು ಜಾರಿಗೆ ಬಾರದಿರುವುದರಿಂದ, ಕೆಲಸ ಸರಿಯಾಗಿ ನಡೆಯುತ್ತಿಲ್ಲವೆಂದೂ, ಈಗ ಕಳ್ಳಭಟ್ಟಿ ತಯಾರಿ ಇತ್ಯಾದಿಗಳೆಲ್ಲ ಜಾಸ್ತಿಯಾಗಿ ಹೋಗಿದೆ ಇದನ್ನು ತಡೆಗಟ್ಟಲು ಸರ್ಕಾರದವರು ನಿಶ್ಶಕ್ತರಾಗಿದ್ದಾರೆ ಎಂದು ತಿಳಿಸಿದ್ದಾರೆ. ಹೌದು. ಆದರೆ ಒಂದೇ ಸಲಕ್ಕೆ ಎಲ್ಲವನ್ನೂ ಖಚಿತವಾಗಿ ಮಾಡುವುದು ಎಲ್ಲರಿಗೂ ಕಷ್ಟಸಾಧ್ಯವಾದ ಕೆಲಸ. ಹಿಂದೆ ಬಾಲ್ಯ ವಿವಾಹ ಮಾಡಕೂಡದೆಂದು ಒಂದು ಅಕ್ಟನ್ನು ಜಾರಿಗೆ ತಂದ ಮೇಲೂ ಕೂಡ ಆ ಸಂಬಂಧವಾಗಿ ಅಕ್ರಮಗಳು ನಡೆಯುತ್ತಿರಲಿಲ್ಲವೇನು? ಆದರೂ ಅದು ಕ್ರಮೇಣ ಸಂಪೂರ್ಣವಾಗಿ ನಿಲ್ಲಲಿಲ್ಲವೇ ಈಗ? ಇದರಂತೆ ಇದೂ ಸಹ ಕೆಲವು ಕಾಲದಲ್ಲೇ ಸಂಪೂರ್ಣವಾಗಿ ಯಶಸ್ವಿಗೆ ಬರುವುದರಲ್ಲಿ ಯಾವ ಸಂದೇಹವೂ ಇಲ್ಲ. ಇದರ ಬಗ್ಗೆ ಸರ್ಕಾರದವರು ಎಷ್ಟು ಶ್ರಮಪಡುತ್ತಿದ್ದಾರೆಂಬುದು ಅವರು ಕೊಟ್ಟಿರತಕ್ಕ ಅಂಕಿ-ಅಂಶಗಳಿಂದಲೇ ವ್ಯಕ್ತಪಡುತ್ತಿದೆ. ಪೂರ್ವಾಪರದಿಂದ ಈ ಕುಡಿತಕ್ಕೆ ಅಹುತಿಯಾಗಿರತಕ್ಕವರನ್ನು ಕೂಡಲೇ ಒಂದೇ ಸಾರ್ತಿಗೆ ಬಿಟ್ಟು ಬಿಡಬೇಕೆಂದರೆ ಅದು ಎಂದಿಗೂ ಸಾಧ್ಯವಾಗದ ಮಾತು. ಅದು ದಿನ ಕ್ರಮೇಣದಲ್ಲಿ ಆಗತಕ್ಕ ಕೆಲಸ. ಕೋಲಾರದಿಂದ ಕುಡಿಯುವ ಬಗ್ಗೆ ಬೆಂಗಳೂರಿಗೆ ಜನರು ಬರುತ್ತಿದ್ದಾರೆಂದು ಹೇಳುತ್ತಿರುವಾಗ ಆ ಕುಡಿತದ ಅಮಲು ಎಂತಹದೆ ಬುದನ್ನು ಹೆಚ್ಚು ವಿವರಿಸಬೇಕಾದ್ದಿಲ್ಲ. ಅವರು ಕುಡಿದು ಜೀವನ ನಡೆಸಿಕೊಂಡು ಹೋಗುತ್ತಿರುವಾಗ ಅವರ ಮಕ್ಕಳು ಮತ್ತು ಹೆಂಗಸರು ಅದನ್ನು ಅಭ್ಯಾಸ ಮಾಡುವುದಿಲ್ಲವೆ? ಹಾಗೆ ಮಾಡಿದರೆ ಸಮಾಜದ ಉನ್ನತಿ ಹೇಗಾಗಬೇಕು ಎಂಬುದನ್ನು ಯೋಚನೆ ಮಾಡಬೇಕು. ಎಷ್ಟು ಜನ ನಾಯಕರು ಮತ್ತು ಸಾರ್ವಜನಿಕರೂ ಕುಡಿಯುತ್ತಿದ್ದಾರೆ. ಸಾರ್ವಜನಿಕರಲ್ಲಿ ಶೇಕಡ 35 ಮಂದಿ ಕುಡಿಯುತ್ತಾರೆಂದು ನನ್ನ ಅವಗಾಹನೆಗೆ ಬಂದಿದೆ. ಉಳಿದ ಕೆಲಸಗಾರರಲ್ಲಿ ಹೆಚ್ಚು ಕುಡುಕರಿದ್ದಾರೆ. ಪಾನ್ಪವಾಗಿ ಅನೇಕ ರೀತಿಯಲ್ಲಿ ಅಂಥವರನ್ನು ಒಳ್ಳೆಯ ದಾರಿಗೆ ತರುವುದು ನಮ್ಮ ಕರ್ತವ್ಯ. ಭಂಗಿ ಸೇಧುವವರು, ಚಮ್, ಜೆನ್, ಬ್ರಾಂದಿ ಮುಂತಾದ ಮಾದಕ ಪದಾರ್ಥಗಳನ್ನು ಸೇವಿಸುವವರೂ ಕುಡುಕರಲ್ಲಿ ಸೇರುತ್ತಾರೆ. ಕುಡಿತದಿಂದ ಎಷ್ಟು ಅನರ್ಥವಿದೆಯೆಂಬುದಕ್ಕೆ ನಾನು ಕಣ್ಣಾರೆ ಕಂಡ ಒಂದು ನಿದರ್ಶನವನ್ನು ಕೊಡುತ್ತೇನೆ. ಒಂದು ಕಡೆ ಪಾನನಿರೋಧ ಜಾರಿಯಲ್ಲಿದ್ದುದರಿಂದ ಅಲ್ಲಿಯವರು 60 ಮೈಲಿಗಳ ದೂರದಲ್ಲಿರುವ ಊರಿಗೆ ಹೋಗಿ ಚೆನ್ನಾಗಿ ಕುಡಿದು, ರಾತ್ರಿ ದಾರಿಯುದ್ದಕ್ಕೂ ಕುಡಿಯುತ್ತಾ ವಾಪಸು ತಮ್ಮ ಸ್ಥಳಕ್ಕೆ ಹೋಗುತ್ತಿದ್ದರು. ಆಗ ಆ ಕಾರು ಗಾಡಿಗಳೆಲ್ಲಾ ಹೋಗಿ ಡ್ರೈವರು ಮತ್ತು ಇತರರಿಗೆ ದಾರಿಯಲ್ಲಿ ತೊಂದರೆಯಾದದನ್ನು ನೋಡಿದೆ. ಹೀಗೆ ಅನೇಕ ದೃಶ್ಯಗಳನ್ನು ಅನೇಕ ಮಹನೀಯರಲ್ಲಿಯೂ ಕಂಡು ನೋಡಿರುತ್ತಾರೆ. ಈ ನಿನ್ನಿಪೇಕ್ಷಗಳನ್ನು ತಪ್ಪಿಸುವುದಕ್ಕಾಗಿ ಈ ವಿಚಾರದಲ್ಲಿ ನಿರ್ಣಯ ತಂದು ಇದರಿಂದ ಆಗುವ ಅನಾಹುತಗಳನ್ನು ವಿವರಿಸಿದ್ದಾಯಿತು. ಇದನ್ನು ತಪ್ಪಿಸುವುದು ಸರ್ಕಾರದ ಪವಿತ್ರ ಕರ್ತವ್ಯ. ಇದು ಸೂಕ್ತವಾದ್ದು ಮತ್ತು ಸಮಿಶ್ರವಾದುದು ಎಂಬುದು

(ಶ್ರೀ ಬಿ. ಎಚ್. ಬೋರಣ್ಣಗೌಡರು.)

ಸರ್ಕಾರದವರಿಗೆ ಮನವರಿಕೆಯಾದರೆ ನಾನು ಈ ಎರಡು ವರ್ಷಗಳಿಂದ ಪಡುತ್ತಿರುವ ಕಷ್ಟಕ್ಕೆ ಫಲ ಲಭಿಸಿ ವಾತ್ತು ಸಾರ್ವಜನಿಕರಿಗೂ ಅನುಕೂಲವಾಗುತ್ತದೆ. ಈ ವಿಚಾರದಲ್ಲಿ ಶ್ರೀ ಪುಟ್ಟೇಗೌಡರು ಒಂದು ತಿದ್ದುಪಡಿಯನ್ನು ತಂದು ಕಡಿತವನ್ನು ಎಲ್ಲಾ ಕಡೆಯೂ ನಿಲ್ಲಿಸಬೇಕೆಂದು ಸೂಚಿಸಿದ್ದಾರೆ. ಅದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ಆ ತಿದ್ದುಪಡಿಯನ್ನು ಸಭೆಯಲ್ಲಿ ಸೂಚಕರು ಮಂಡಿಸುವುದಕ್ಕೆ ಮುಂಚೆ ಆ ವಿಚಾರವನ್ನು ಹೇಳಲು ಅವಕಾಶವಿಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ನನ್ನ ಅಭಿಪ್ರಾಯವನ್ನು ನಾನು ಸೂಚಿಸಿದ್ದೇನೆ.

Mr. SPEAKER.—Resolution moved:

"This Assembly is of the opinion that prohibition be introduced in the Hassan District from the year 1951-52."

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು (ಹಾಸನ ಜಿಲ್ಲೆ).—ಸ್ವಾಮಿ, ನಾನು ಈ ನಿರ್ಣಯವನ್ನು ಅನುಮೋದಿಸುತ್ತೇನೆ.

ಅಧ್ಯಕ್ಷರು.—ತಿದ್ದುಪಡಿಯನ್ನು ಮಂಡಿಸಿದಮೇಲೆ ಡರ್ಡ್ ಮಾಡುವುದು ಅನುಕೂಲ.

Sri B. HUTCHE GOWDA (Tumkur District-General).—I beg to move my amendment which reads as follows:—

"For the words, 'Hassan District', substitute the words 'remaining districts'."

ಸ್ವಾಮಿ, ಹಾಸನ ಜಿಲ್ಲೆಯೊಂದರಲ್ಲಿ ಮಾತ್ರ 1951-52ನೆಯ ಸಾಲಿನಿಂದ ಪಾನನಿರೋಧವನ್ನು ಜಾರಿಗೆ ತರಬೇಕೆಂದು ಈ ನಿರ್ಣಯದಲ್ಲಿ ಹೇಳಿದೆ. ಬಹುಶಃ ಅವರು ಹಾಸನ ಜಿಲ್ಲೆಯವರಾಗಿ ಇರಬಹುದು. ಕುಡಿತವಿಂದಾಗುವ ಅನಾಹುತವನ್ನು ಚೆನ್ನಾಗಿ ವಿವರಣೆ ಮಾಡಿದ್ದಾರೆ. ಪಾನನಿರೋಧವು ತಮ್ಮ ಜಿಲ್ಲೆಯಲ್ಲಿ ಮಾತ್ರ ಇರಬೇಕು, ಬೇರೆ ಕಡೆ ಬೇಡ ಎಂದು ಹೇಳಿದರು. ಕುಡಿತದಿಂದ ಎಷ್ಟು ಅನಾಹುತವಾಗಿದೆಯೆಂಬುದರ ಮೇಲೆ ನಾನು ಹೆಚ್ಚಾಗಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ ಅನೇಕ ವರ್ಷಗಳಿಂದ ಪ್ರತಿ ವರ್ಷವೂ ಕೂಡ ಹಿಂದಿದ್ದ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳಲ್ಲಿ ಇವೇ ತರಹ ನಿರ್ಣಯ ಬಂದು ಅಂಗೀಕೃತವಾಗಿದೆ. ಒಂದು ಒತ್ತಾಯದ ಮೇರೆ ಹಿಂದಿದ್ದ ಬೇಜವಾಬ್ದಾರಿ ಸರ್ಕಾರದವರು ಇದನ್ನು ಒಪ್ಪಿಕೊಂಡುಬಿಟ್ಟರು.

ಶ್ರೀ ಜಿ. ಪ್ರ. ಆಚಾರ್ಯರು (ಬೆಂಗಳೂರು ಜಿಲ್ಲೆ).—ಪಾನನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತಂದರೆ ಬೋಕಾಬಿಳುವ ಎರಡು ಕೋಟಿ ರೂಪಾಯಿಗಳನ್ನು ಹೇಗೆ ಒದಗಿಸಬೇಕೆಂಬುದನ್ನು ಮಾತ್ಯ ಸದಸ್ಯರು ಹೇಳಬೇಕು.

ಶ್ರೀ ಬಿ. ಹುಚ್ಚೇಗೌಡರು.—1947-48ರಲ್ಲಿ ಪಾನನಿರೋಧವನ್ನು ಜಾರಿಗೆ ತಂದರು. ಆಗ ಒಂದು ನೀತಿಯನ್ನು ಅನುಸರಿಸಿದ್ದಾರೆ. ನಾಲ್ಕು ವರ್ಷಗಳವರೆಗೆ ಪ್ರತಿ ವರ್ಷವೂ ಶೇಕಡ 20ರಂತೆ ಕಡಮೆಮಾಡಿ ಐದನೆಯ ವರ್ಷ ಪೂರ್ತಿಯಾಗಿ ಜಾರಿಗೆ ತರಬೇಕೆಂದು ಒಂದು ಕಾರ್ಯಕ್ರಮವನ್ನು ಹಾಕಿದರು. ಅದರಂತೆ ಒಂದು ವರ್ಷ ನಡೆಯಿತು. ಆಗ ತೆರಿಗೆ ಸುಂಕ ವಗೈರೆ ಯಾವುದನ್ನೂ ಹೆಚ್ಚಿಸಲಿಲ್ಲ. ದೇಶದ ಆಗಿನ ಬಜೆಟ್ಟನ್ನು ಹೇಗೋ ಸರಿದೂಗಿಸಿದರು. ಆದರೆ ಮುಂದಿನ ವರ್ಷ 1/5 ಭಾಗ ಕಡಮೆಮಾಡುವುದಕ್ಕೆ ನಾವೆಲ್ಲಾ ವಿರೋಧಿಸಿದೆವು. ಆ ರೀತಿಯಾಗಿ ಕಡಮೆಮಾಡಿದರೆ ಕಂಟ್ರಾಕ್ಟರುಗಳಿಗೆ ಉತ್ಪತ್ತಿ ಹೆಚ್ಚುತ್ತದೆ. ಹರಾಜು ಮಾಡಿದರೆ ಸರ್ಕಾರಕ್ಕೆ ಉತ್ಪತ್ತಿಯಾದರೂ ಬರುತ್ತೆ. ಕುಡಿತವೇನೂ ನಾಲ್ಕು ವರ್ಷ ತಪ್ಪುವುದಿಲ್ಲ ಎಂದು ವಿರೋಧಿಸಿದರೂ ಪಾನನಿರೋಧವು ಜಾರಿಗೆ ಬಂತು. ಆ ಮೇಲೆ ಐದುಮೈಲಿ ಸರಹದ್ದು ಪಾನನಿರೋಧವು ಜಾರಿಗೆ ಬಂದು ಅಲ್ಲಿ ಮಾಡಬೇಕಾದ ವ್ಯವಹಾರಗಳನ್ನು ಮಾಡುವ ಅಂಗಡಿಯಾವುದೂ ಇರಕೂಡದೆಂಬ ಕಾನೂನು ಜಾರಿಯಾಯಿತು. ಅದರಿಂದ ಅನೇಕ ಅನುಕೂಲಗಳಾದವು. ಆಮೇಲೆ 194೫ನೆಯ ಇಸವಿ ಬಜೆಟ್ ಅಧಿವೇಶನದಲ್ಲಿ ಆಗಿನ ಪಾನನಿರೋಧ ಕ್ರಮವು ಸರಿಯಾಗಿಲ್ಲವೆಂದು ಹೇಳಿದ ಮೇಲೆ ಮೂರನೆ ವರ್ಷದಿಂದ ಪೂರ್ತಿಯಾಗಿ ನಿಲ್ಲಿಸಬೇಕೆಂದು ಒಂದು ವರ್ಷಕ್ಕೆ ಮೂರು ಜಿಲ್ಲೆಗಳಲ್ಲಿ ಆಚರಣೆಗೆ ತರುವಂತೆ ನಿರ್ದಿಷ್ಟ ಮಾಡಿದರು. 1/5 ಭಾಗ ಕಡಮೆ ಮಾಡುವುದರಿಂದ ಕುಡಿತವು ಕಡಮೆಯಾಗುವುದಿಲ್ಲ. ಸ್ವಲ್ಪ ದೂರವಾದರೂ ಹೋಗಿ ಕುಡಿಯುತ್ತಾರೆ. ಅದರಿಂದ ಕೇವಲ ಕಂಟ್ರಾಕ್ಟರುಗಳಿಗೆ ಅನುಕೂಲವಾಗುತ್ತದೆ ಎಂದು ಆಗಿನ ಪ್ರತಿನಿಧಿಗಳು ಅಭಿಪ್ರಾಯಪಟ್ಟದ್ದರಿಂದ ಹಾಗೆ ಜಾರಿಮಾಡಿದರು. ಹಾಗೆ ಮಾಡುವಾಗ ನಷ್ಟದ ಭರ್ತಿಗಾಗಿ ಸೇಲ್ಸ್ ಟ್ಯಾಕ್ಸ್ ಎಂಬ ತೆರಿಗೆಯನ್ನು ಹಾಕಿದರು. ಆಗ ದೇಶದಲ್ಲಿ ಜನರ ನೈತಿಕ ಮಟ್ಟವನ್ನು ಹೆಚ್ಚಿಸುವುದಕ್ಕೆ ಮತ್ತು ಅನೇಕ ಬಡ ಸಂಸಾರಗಳ ಕಷ್ಟವನ್ನು ತಪ್ಪಿಸುವುದಕ್ಕೆ ತೆರಿಗೆ ಹಾಕಿದ್ದರಿಂದ ಜನರು ಒಂದು ಉದ್ದೇಶವಿಂದ ಒಪ್ಪಿದರು. ಆದರೆ ಒಂದು ವರ್ಷದಲ್ಲಿ ಮೂರು ಜಿಲ್ಲೆಗಳಿಗೆ ಬದಲು ಎರಡು ಜಿಲ್ಲೆಗಳಲ್ಲಿ ಜಾರಿ ಮಾಡಿದರು. ಈಗ ಅದೇ ಕಾಂಗ್ರೆಸ್ ಪಕ್ಷದವರು ಬಂದು ಸಭೆಯ ಮುಂದೆ ನಿರ್ಣಯವನ್ನಿಟ್ಟು ಸಭೆಯ ಅನುಮತಿಯನ್ನು ಪಡೆಯುತ್ತಿದ್ದಾರೆ. ಹಿಂದೆ ಶ್ರೀ ಕೆ. ಹನುಮಂತಯ್ಯನವರು ಕಾಂಗ್ರೆಸ್ ಪಕ್ಷದ ನಾಯಕರಾಗಿ ಹೇಳಿದ ವಿಚಾರವನ್ನು ಈ ಸಭೆಯ ಗಮನಕ್ಕೆ ತರುತ್ತೇನೆ. "ಶತಪ್ರತಿಶತದಿಂದ ಬಿಟ್ಟಿದ್ದನ್ನು ಈ ದಿವಸ ಸಾಧನೆ ಮಾಡಿದ್ದೇವೆ" ಎಂದು ಹೇಳಿದ್ದಾರೆ. ಹಿಂದೆ 1/5 ಭಾಗ ಕಡಮೆ ಮಾಡುವುದಕ್ಕೆ ಮಾಡಿದ್ದ ಯೋಜನೆಗೆ ಬದಲಾಗಿ ಮೂರು ವರ್ಷದಲ್ಲಿ ಪೂರ್ಣ ನಿರೋಧ ಮಾಡುವಂತೆ ನಮ್ಮ ಸರ್ಕಾರ ನಿರ್ಧರಿಸಿದೆ ಎಂದು ಇವತ್ತಿನ ಅಧ್ಯಕ್ಷರು ಆಗ ಚೀಫ್ ಜಸ್ಟಿಸ್ ಬೆಂಚಿನಲ್ಲಿದ್ದವರು ಹೇಳಿದ್ದಾರೆ ಹಾಗೆ ಹೇಳಿದಾಗ 310 ಜನರಿರುವ ಸಭೆಯಲ್ಲಿ ಒಂದು ಆಕ್ಷೇಪಣೆಯ ಕೂಗು ಸಹ ಇರಲಿಲ್ಲ. ಅಷ್ಟು ಸರ್ವಾನುಮತದಿಂದ ಒಪ್ಪಿಗೆಯಾಗಿದ್ದಂಥ ಒಂದು ಅಭಿಪ್ರಾಯಕ್ಕೆ ಈ ಸರ್ಕಾರದವರು ತಿಲಾಂಜಲಿಯನ್ನು ಕೊಟ್ಟಿದ್ದಾರೆ. ಈಗಿನ ಸರ್ಕಾರದವರು ವಚನಭ್ರಷ್ಟರಾಗಿದ್ದಾರೆ. ಯಾವ ಒಟುದಾರರ ಮುಂದೆ ಬಂದು ತಾವು ಅಧಿಕಾರಕ್ಕೆ ಬಂದ ಕೂಡಲೆ ಪಾನನಿರೋಧವನ್ನು ತಕ್ಷಣ ಜಾರಿಗೆ ತರುತ್ತೇವೆಂದು ಹೇಳುತ್ತಿದ್ದ ಪಹಾಯರು ಈ ದಿವಸ.....

ಶ್ರೀ ಜಿ. ವೀರಪ್ಪನವರು.—"ವಚನಭ್ರಷ್ಟರು" ಎಂಬುದು ಪಾರ್ಲಿಮೆಂಟರಿಯೆ?

ಶ್ರೀ ಬಿ. ಹುಚ್ಚೇಗೌಡರು.—ಸರ್ಕಾರದವರು ವಚನಭ್ರಷ್ಟರಾಗಿದ್ದಾರೆ. ಚುನಾವಣೆ ಕಾಲದಲ್ಲಿ ತಾವು ಚುನಾವಣೆಯಾಗಬೇಕಾಗಿದ್ದರೆ ಪ್ರಚಾರಮಾಡುವಾಗ ಅದರಲ್ಲಿ ಪಾನನಿರೋಧಕ್ಕೆ ಅಗ್ರಸ್ಥಾನವಿತ್ತು. ತಾವು ಚುನಾವಣೆಯಾಗಿ ಬಂದರೆ ಪಾನನಿರೋಧವನ್ನು ಮೊದಲು ಜಾರಿಗೆ ತರುವುದಾಗಿ ಜನರಿಗೆ ಮಾತು ಕೊಟ್ಟರು. ಇಂತಹ ವಾಗ್ದಾನಕ್ಕೆ

ಇಪ್ಪೊತ್ತು ಅವರು ತಪ್ಪಿದ್ದಾರೆ. ಸ್ವಾಮಿ, ಮುಖ್ಯ ಮಂತ್ರಿಗಳಾಗಿರುವವರು 1948 ನೆಯ ಇಸವಿಯಲ್ಲಿ ನಮ್ಮ ಜಿಲ್ಲೆಗೆ ಬಂದಾಗ, ಮೂರು ಜಿಲ್ಲೆಗಳಲ್ಲಿ ಮದ್ಯ ಪ್ರಾನವನ್ನು ನಿಲ್ಲಿಸಿದ್ದೇವೆ, ಮುಂದಿನ ವರ್ಷ ಇನ್ನು ಮೂರ ಜಿಲ್ಲೆಗಳಲ್ಲಿ ನಿಲ್ಲಿಸುತ್ತೇವೆ, ಅದರ ಮುಂದಿನ ವರ್ಷ ಇನ್ನು ಮೂರು ಜಿಲ್ಲೆಗಳಲ್ಲಿ ನಿಲ್ಲಿಸುತ್ತೇವೆ. ಹೀಗೆ ಪೂರ್ತಿಯಾಗಿ ನಂಸ್ಥಾನದಲ್ಲೆಲ್ಲಾ ಪಾನ ನಿರೋಧವನ್ನು ಜಾರಿಗೆ ತರುತ್ತೇವೆ, ನೀವು ಬೆಂಬಲ ಕೊಡಬೇಕೆಂದು ಕೇಳಿದರು. ಆಗ ತಕ್ಷಣ ಅವರಿಗೆ ನಮ್ಮ ಜಿಲ್ಲೆಯ ಪರವಾಗಿ ನಮ್ಮ ಕೃತಜ್ಞತೆಯನ್ನು ಸ್ಮರಿಸಿದೆ. ಆದರೆ ಈಗ ಏನಾಗಿದೆ? ಪ್ರತಿದಿನವೂ ಸಾವಿರಾರು ಜನರು ರೈಲಿನಲ್ಲಿ ನಿಡುವಂದ ಸ್ಟೇಷನ್ನಿಗೆ ಬರುತ್ತಾರೆ ಅಲ್ಲಿ ಕುಡಿಯುವುದಕ್ಕೆ. ಸಾಯಂಕಾಲ ಆರುಗಂಟೆಯ ಹೊತ್ತಿನಲ್ಲಿ ಅಲ್ಲಿ ಹೋಗಿ ನೋಡಿದರೆ ಎಷ್ಟು ಜನ ತರೆ ಒಡೆದು ಕೊಳ್ಳುತ್ತಾರೆಂದು ಗೊತ್ತಾಗುತ್ತದೆ. ಸಾವಿರಾರು ಜನರು ಡಾಬ್ಸ್‌ಪೇಟೆಗೆ ಬಂದು ಕುಡಿದು ಹೋಗುತ್ತಾರೆ. ಹಿಂದೆ ಸರಹೆದ್ದಿನಿಂದ ಐದು ಮೈಲಿ ಅಂತರದಲ್ಲಿ ನಿಷೇಧಿಸಿ ಈಗ ಅವನ್ನೂ ತೆಗೆದುಹಾಕಿದರು. ಗಡಿಯಲ್ಲಿ ಅರ್ಧ ಅಂಗಡಿ ಪಾನನಿರೋಧ ಜಾರಿಯಲ್ಲಿರುವ ಪ್ರದೇಶದಲ್ಲಿರುವುದೂ ಇದೆ. ಇದರಿಂದ ಜನರಿಗೆ temptation ಹುಟ್ಟುವುದಕ್ಕೆ ಕಾರಣವಾಗಿದೆ. ಕುಡುಕರಿಗೆ ಹಿಗೆ ಎಕ್ಕದರ್ಲೆಲ್ಲೇ ಕುಡಿತವನ್ನು ತೋರಿಸಿದರೆ ಬಿಡುತ್ತಾರೆಯೆ? ಮಕ್ಕಳಿಗೆ ಹಣ್ಣು ತೋರಿಸಿ ಕೊಡದೇ ಹೋದರೆ ಹೇಗೋ ಹಾಗೆಯೇ ಇದೂ ಆಗಿದೆ. ಆದರಿಂದ ಹೆಚ್ಚು ಜನ ಕುಡಿಯುತ್ತಾರೆ. ಹೀಗೆ ಕುಡುದು ತಮ್ಮ ಊರಿಗೆ ಬಂದರ ಅವರ ಮೇಲೆ ಕೇಸು ಹಾಕುತ್ತಾರೆ. ಪಾನ ನಿರೋಧ ಯಶಸ್ವಿಯಾಗಲಲ್ಲವೆಂದೂ ಇದನ್ನು ಬಿಟ್ಟುಬಿಡಬೇಕೆಂದೂ ಈ ಸಭೆಯವರು ಹೇಳಲೆಂದು ಈ ರೀತಿ ಪಾಡುತ್ತಾರೆಯೇ ಹೊರತು ಇನ್ನೇನೂ ಇಲ್ಲ.

ಇನ್ನೊಂದು ವಿಚಾರ. ಕುಡಿತದ ಬಾಬಿನಿಂದ 1947-48ರಲ್ಲಿ ವರಮಾನ 174 ಲಕ್ಷ ಇದ್ದದ್ದೂ ಈಚಿನ ವರ್ಷಗಳಲ್ಲಿ 192 ಲಕ್ಷ, 214 ಲಕ್ಷ ಹೀಗೆ ಹೆಚ್ಚುತ್ತಿದೆ. ಇದರ ಜೊತೆಗೆ ಸೇಂಟ್ಸ್ ಟ್ಯಾಕ್ಸಿನಿಂದ ವರಮಾನ ಎರಡು ಕೋಟಿವರೆಗೆ ಹೆಚ್ಚುತ್ತಿದೆ. ಮೊನ್ನೆ ಒಂದು ನಂದರ್ಭದಲ್ಲಿ ಅಬ್ಕಾರಿ ಸಚಿವರು ಆರುಸಾವಿರ ಕೇಸುಗಳನ್ನು ಹಾಕಿದ್ದೇವೆಂದು ಹೇಳಿದರು. ಅಂದರೆ ಪ್ರತ್ಯಕ್ಷಕ್ಕೇ ಎಷ್ಟರಿಕೆಯಿಂದ ಪ್ರತಿಯೊಂದು ಕೇಸನ್ನೂ ಹಿಡಿದು ಶಿಕ್ಷೆ ಮಾಡುತ್ತಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಕಳ್ಳತನ ಮುಂತಾದ ಅಪರಾಧಗಳು ಕೂಡ ಸಾಮಾನ್ಯವಾಗಿ ನಡೆಯುತ್ತಲೇ ಇವೆ. ಪಾನನಿರೋಧ ಕಾನೂನು ಜಾರಿಯಲ್ಲಿರುವ ಪ್ರದೇಶದಲ್ಲಿ ಕಾನೂನಿಗೆ ವಿರೋಧವಾಗಿ ನಡೆಯದಂತೆ ನೋಡಿಕೊಳ್ಳುವುದು ಸರ್ಕಾರದ ಪರ ಕರ್ತವ್ಯ. ಅಲ್ಲೇನಾರಾರು ಜನರು ಕಮ್ಮಿ ಕುಡಿಯುತ್ತಾರೆಂದರೆ ಸರ್ಕಾರಕ್ಕೆ ಅಗೌರವ. ಇನ್ನೊಂದು ವಿಚಾರವೆಂದರೆ, ಕೆಲವು ಕಡೆ ಪಾನನಿರೋಧ ಜಾರಿಯಲ್ಲಿದ್ದು ಮತ್ತೆ ಕೆಲವು ಕಡೆ ಇಲ್ಲದೇಯಿರುವುದರಿಂದ ಯಾವ ಯಾವ ಜಿಲ್ಲೆಯಲ್ಲ ಪಾನನಿರೋಧ ಜಾರಿಮಾಡಿದ್ದಾರೋ ಅಲ್ಲಿ ಒಬ್ಬ ಕೂಲಿಯೂ ಸಿಕ್ಕುವುದಿಲ್ಲ. ಇದು ಜಾರಿಯಲ್ಲಿಲ್ಲದೇ ಇರುವ ಮಂಡ್ಯ, ಮೈಸೂರು, ಹಾಸನ ಜಿಲ್ಲೆಗಳಿಗೆ ಹೊರಟುಹೋಗುತ್ತಾರೆ. ಹೀಗೆ ಕೆಲವು ಜಿಲ್ಲೆಗಳಲ್ಲಿ ಕೂಲಿಯವರು ಕಡಿಮೆಯಾಗಿ ವ್ಯವಸಾಯದ ಕೆಲಸ ಬದ್ದುಹೋಗಿದೆ. ಆದರಲ್ಲಿಯೂ ಮಲೆನಾಡಿನಲ್ಲಿ ಕುಡಿಯುವುದಕ್ಕೆ ಅವಕಾಶವಿಲ್ಲದೇ ಇರುವುದರಿಂದ ಅವಕಾಶವಿರುವ ಕಡೆಗೆ ಹೋಗುತ್ತಿದ್ದಾರೆ. ನಮ್ಮ ಜಿಲ್ಲೆಯವರು ಪೋಕ್ಸಾರು ಕಾರುಗಳನ್ನು ಮಾಡಿಕೊಂಡು ಬೆಂಗಳೂರಿಗೆ ಬಂದು ಇಲ್ಲಿ ಬೇಕಾದಷ್ಟು ಕುಡಿದು ಮೂರು ದಿನವಿದ್ದು ಹೋಗುತ್ತಾರೆ.

ಎಲ್ಲಕ್ಕಿಂತ ಹೆಚ್ಚಾಗಿ ಪ್ರಜಾಸತ್ತಾತ್ಮಕ ಸರ್ಕಾರವಿರುವ ಈ ಕಾಲದಲ್ಲಿ ಮತದಾರರಿಗೆ ಚುನಾವಣೆ ಕಾಲದಲ್ಲಿ ಯಾವ ವಾಗ್ದಾನವನ್ನು ಕೊಟ್ಟಿದ್ದರೋ ಅದನ್ನು ನಡೆಸುವುದು ಪ್ರಥಮ ಕರ್ತವ್ಯ. ಅವರಿಗೆ ಮತ ಕೊಟ್ಟು ಅಧಿಕಾರಕ್ಕೆ ಬಂದು ಅವರಂತೆ ಕಾರ್ಯಕ್ರಮವನ್ನು ಹಾಕಿ ಈಗ ಅದನ್ನು ನಿಲ್ಲಿಸಿರುವುದು ಸರಿಯಲ್ಲ. ಹೀಗೆಮಾಡಲು ಮತ್ತೆ ಜನರಲ್ಲಿ ಹೋಗಿ ಅವರ ಅನುಜ್ಞೆ ಪಡೆಯಬೇಕು, ಅವರಿಂದ ಅಧಿಕಾರ ಪಡೆಯ ಬೇಕು. ರೆಫರೆಂಡಮ್ ತೆಗೆದುಕೊಂಡು ಅಧಿಕಾರ ಪಡೆಯಬೇಕು. ಹಾಗಿಲ್ಲದೆ ಒಂದುಸಾರಿ ಅವರ ಅಭಿಪ್ರಾಯದಂತೆ ಹಾಕಿದ ಕಾರ್ಯಕ್ರಮವನ್ನು ಬದಲಾಯಿಸಲು ಸರ್ಕಾರಕ್ಕೆ ಅಧಿಕಾರವಿಲ್ಲ.

ಈಗ ಹಾಸನ ಜಿಲ್ಲೆಯ ವಿಚಾರ ತೆಗೆದುಕೊಂಡರೆ, ಪಕ್ಕದಲ್ಲಿರುವ ಮದ್ರಾಸು ಪ್ರಾಂತದಲ್ಲೆಲ್ಲಾ ಪಾನನಿರೋಧ ಜಾರಿಗೆ ಬಂದಿದೆ, ತುಮಕೂರು, ಶಿವಮೊಗ್ಗ ಚಿತ್ರದುರ್ಗ ಜಿಲ್ಲೆಗಳಲ್ಲಿ ಬಂದಿದೆ, ಅದರೆ ಹಾಸನ ಜಿಲ್ಲೆಯಲ್ಲಿ ಮಾತ್ರ ಪಾನನಿರೋಧ ಜಾರಿಮಾಡಿಲ್ಲ. ಅರಸೀಕೆರೆಯಲ್ಲಿ 140 ಗ್ಯಾಲನ್ ಮಾರಾಟವಾಗುತ್ತಿದ್ದುದು 1,000 ಗ್ಯಾಲನ್ ಖರ್ಚಾಗುತ್ತಿದೆ. ಇದು ಹೇಗೆ ಸಾಧ್ಯ? ಇದನ್ನು ನಮ್ಮ ಮಾನ್ಯ ಸಚಿವರು ವಿವರಣೆ ಕೊಡಬಹುದು. ಹೀಗೆ ಏಕ್‌ದಂ ಒಂದಕ್ಕೆ ಹತ್ತು ಇಪ್ಪತ್ತರಷ್ಟಾದರೆ ಕಂಟ್ರಾಕ್ಟರಿಗೆ ಎಷ್ಟು ಲಾಭ ಬರುತ್ತದೆ ಬಹುದೆಂದು ಯೋಚನೆಮಾಡಬೇಕು. ಅವನಿಗೆ ಹೆಚ್ಚು ಸರಬರಾಯಾಗದೇಯಿದ್ದರೂ ಏಕ್‌ದಂ ಇಷ್ಟು ಹೆಚ್ಚಾಗಿ ಮಾರಬೇಕಾದರೆ, ಅವನು ಕಳ್ಳತನದಿಂದ ತಂದು ಮಾರಬೇಕು. ಪ್ರತಿತಿಂಗಳೂ ಇಷ್ಟು ಕೊಡಬೇಕೆಂದು ಗೊತ್ತುಮಾಡಿರುವುದರಿಂದ ಈ ರೀತಿ ಆಗುತ್ತಿದೆ.

ಪಾನನಿರೋಧ ನೀತಿಯ ವಿಚಾರದಲ್ಲಿ ಇನ್ನೊಂದು ವಿಷಯ. ಇಂಡಿಯಾ ಸರ್ಕಾರದವರು ಈ ವಿಚಾರದಲ್ಲಿ ಎಚ್ಚರಿಕೆಯಿಂದ ಮುಂದೆ ಹೋಗಬೇಕೆಂದು ಹೇಳಿದ್ದಾರೆಂದು ಹೇಳಿದರು. ಅವರು ಮದ್ರಾಸು ಮತ್ತು ಬೊಂಬಾಯಿ ಪ್ರಾಂತಗಳಿಗೆ ಈ ರೀತಿ ಹೇಳಲಲ್ಲವೇ? ಮದ್ರಾಸಿನ 24 ಜಿಲ್ಲೆಗಳಲ್ಲಿಯೂ ಧೈರ್ಯಮಾಡಿ ಪಾನನಿರೋಧವನ್ನು ಜಾರಿಮಾಡಲಿಲ್ಲವೆ? ಬೊಂಬಾಯಿನಲ್ಲೂ ಏನೂ ಆತಂಕವಿಲ್ಲ. ಹೀಗಿದ್ದರೂ ಮೈಸೂರು ಸಂಸ್ಥಾನದಲ್ಲಿ ಐದು ಜಿಲ್ಲೆಗಳಲ್ಲಿ ಜಾರಿಗೆ ತಂದರೆ ಇನ್ನು ನಾಲ್ಕು ಜಿಲ್ಲೆಗಳಲ್ಲಿ ತರದೇಯಿರುವುದು ನ್ಯಾಯವೇ! ಕಾಂಗ್ರೆಸ್ಸಿನವರು ಹೆಂಡದಿಂದ ಬರುವ ಹಣ ಕಲುಷಿತವಾದುದು, ಕಲ್ಮಷವಾದುದು, ಇದನ್ನು ಮುಟ್ಟಬಾರದೆಂದು ಸಾರಿ ಸಾರಿ ಹೇಳಿದ್ದಾರೆ, ಸಭೆಯಲ್ಲಿ. ಅದು tainted money ಎಂದು ಹೇಳುತ್ತಿದ್ದಾರೆ. ನಾವು ಯಾವ ದೃಷ್ಟಿಯಿಂದ ನೋಡಿದರೂ ಇದು ಒಳ್ಳೆಯದಲ್ಲ. ಇದರಿಂದ ದೇಶದ ಬಡವರಿಗೆ ಹಣ ಉಳಿಯುತ್ತದೆಯೇ ಎಂದು ಲೆಕ್ಕಹಾಕಿದರೆ ಅದೂ ಇಲ್ಲ. ನೈತಿಕ ದೃಷ್ಟಿಯಿಂದ ನೋಡಿದರಂತೂ ಕುಡಿತವನ್ನು ಖಂಡಿತ ನಿಲ್ಲಿಸಲೇಬೇಕು. ಇದರಿಂದ ಕಡಿಮೆ ಬೀಳುವ ವರಮಾನವನ್ನು ಯಾವ ರೀತಿ ಭರ್ತಿಮಾಡಬೇಕೆಂಬುದನ್ನು ಸರ್ಕಾರ ಯೋಚಿಸಿ ಭರ್ತಿಮಾಡಬೇಕು. ಯಾರು ತೆರಿಗೆಯನ್ನು ಕೊಡಲು ಶಕ್ತರೋ ಅವರಮೇಲೆ ತೆರಿಗೆ ಹಾಕಬೇಕು. ಇದು ಈ ಸಭೆಯ ಮತ್ತು ಸರ್ಕಾರದ ಧರ್ಮ. ಯಾರು ಕಂದಾಯವನ್ನು ಹೆಚ್ಚು ಕೊಡಬೇಕೋ ಅವರಿಂದ ವಸೂಲುಮಾಡಿ ಸರ್ಕಾರದ ಬೊಕ್ಕಸವನ್ನು ತುಂಬಿಸಬೇಕೆಂದು ಹೇಳುತ್ತೇನೆ. ಆದ್ದರಿಂದ ನೀವು ಈ ಹಣವನ್ನು ಯಾವ ದೇಶಾಭ್ಯುದಯ ಕಾರ್ಯಕ್ಕೂ ಸಹ ಉಪಯೋಗಿಸಬಾರದು, ಇದಕ್ಕೆ ಬದಲಾಗಿ ಯಾರು ಇಲ್ಲಿಯವರೆಗೂ ತಿಂದು ಬೊಜ್ಜು ಬೆಳೆಸಿದ್ದಾರೋ ಅವರಿಂದ ದುಡ್ಡು ವಸೂಲುಮಾಡಿ. ಅವರು

(ಶ್ರೀ ಡಿ. ವೀರೇಂದ್ರ ನವರು.)

ಏಕೆ ಕೊಡಬಾರದು? ನೂರಾರು ಕಡೆ ಉದ್ಯೋಗ ನಡೆಸಿ ಲಕ್ಷಾಂತರ ರೂಪಾಯಿ ಸಂಪಾದಿಸಿರುತ್ತಾರೆ ಅಂತಹವರಿಂದ ಸೂಪರ್‌ಟ್ಯಾಕ್ಸ್ ಮುಂತಾದ ತೆರಿಗೆಗಳನ್ನು ಹಾಕಿ ವಸೂಲುಮಾಡಿ ತೆಗೆದುಕೊಳ್ಳಿ. ಇಂಗ್ಲೆಂಡು, ಅಮೆರಿಕಾ ಮುಂತಾದ ಕಡೆಗಳಲ್ಲಿ ಎಕ್ಸೇಸ್ ತೆರಿಗೆ ಹಾಕುತ್ತಾರೆ. ಉದಾಹರಣೆಗೆ ಇಂಗ್ಲೆಂಡಿನಲ್ಲಿ ಒಂದು ಪೌಂಡಿಗೆ 19½ ಷಿಲಿಂಗ್‌ವರೆಗೂ ತೆರಿಗೆ ಹಾಕುತ್ತಾರೆ ಎಂದು ಕೇಳಿದ್ದೇನೆ. ಅದೇ ರೀತಿ ಇಲ್ಲೂ ಏಕೆ ಹಾಕಬಾರದು? ಏಕೆ ಹಿಂದೆಮುಂದೆ ನೋಡುತ್ತೀರಿ? ಕುಡಿಯುವುದರಿಂದ ಆಗತಕ್ಕ ಕಷ್ಟನಷ್ಟ ಅಷ್ಟಿಷ್ಟಲ್ಲ. ಬಡವನ ಸಂಸಾರ ಹಾಳಾಗುತ್ತದೆ. ಅವನು ಮಾಡತಕ್ಕ ಸಂಪಾದನೆ ಬಹಳ ಸ್ವಲ್ಪ, ಅವನ್ಕೆರ್ನಾ ಈ ಕುಡಿತಕ್ಕೇ ಹಾಕಿ ಹೊಟ್ಟೆಗಿಲ್ಲದೆ, ಬಟ್ಟೆಗಿಲ್ಲದೆ, ಗಂಡಹೆಂಡಿರು ಹೊಡೆದಾಡುತ್ತಾರೆ. ಅನೇಕ ಅನಾಹುತಗಳು ಆಗುತ್ತಿವೆ. ಇದನ್ಕೆರ್ನಾ ಬೇಕಾದಷ್ಟು ಸಿನಿಮಾ ನೂಲಕ ಪ್ರಚಾರಮಾಡಿದ್ದೀರಿ. ಹೋದವರ್ಷ ಎರಡು ವರ್ಷದ ಒಂದು ಯೋಜನೆಹಾಕಿ ಮದರಾಸು, ಬೊಂಬಾಯಿ ಪ್ರಾಂತಗಳ ಸಮಾನಕ್ಕೇ ನಾವೂ ಇದ್ದೇವೆ ಎಂದು ಹೇಳಿಕೊಳ್ಳಬೇಕೆಂದಿದ್ದಿರಿ. ಆದರೆ ಆ ರೀತಿ ಮಾಡಲಿಲ್ಲ. ಯಾವ ಒಂದು ಹೊಸಮಾರ್ಗದಲ್ಲೂ ಕೂಡ ಮೈಸೂರು ಮಾದರಿಯಾಗಿವೆ ಎಂದು ಹೇಳಿಕೊಳ್ಳುವ ಹಾಗಿಲ್ಲ. ಹೋದ ತಿಂಗಳು ಹಾಸನ ಡಿಸ್ಟ್ರಿಕ್ಟ್‌ನ ಸ್ಪಬ್ಸ್ಟಿಟ್ಯೂಟಿಕ್ಕೆ ಹೋಗಿದ್ದೆ, ಅಲ್ಲಿ ಹಾಸನ ಮತ್ತು ಮಂಗಳೂರು ಡಿಸ್ಟ್ರಿಕ್ಟ್‌ಬೋರ್ಡ್ ಪ್ರೆಸಿಡೆಂಟರುಗಳು ಬಂದಿದ್ದರು. ಅವರೂ ನಾನೂ ಕರೆತು ಮಾತನಾಡಬೇಕಾದರೆ, ಪಾನನಿರೋಧಮಾಡಿದ ಕಡೆಯೆರ್ನಾ, ಕುಡಿಯುವುದು ಮಾತ್ರ ತಪ್ಪಿಲ್ಲ. ಬರುತ್ತಿದ್ದ ಉತ್ಪತ್ತಿ ಮಾತ್ರ ಕಡಿಮೆಯಾಗಿದೆ. ಇದರಿಂದ ಏನು ಪ್ರಯೋಜನವಾದಂತಾಯಿತು ಎಂದು ಹೇಳಿ ವ್ಯಸನಪಟ್ಟರು. ನಮಗೆ ಈ ಬಾಬಿನಿಂದ ಬರತಕ್ಕ ಸಾವಿರಾರು ರೂಪಾಯಿ ಆದಾಯ ಹೊರಟು ಹೋಯಿತು. ಜನಗಳಲ್ಲಿ ನೀತಿ ಇದೆಯೇ ಎಂದರೆ ಅದೂ ಇಲ್ಲ. ಕದ್ದು ಕುಡಿಯುವುದನ್ನು ನಿಲ್ಲಿಸಬೇಕಾದರೆ ನೂರು ಅಥವಾ ನಾಲ್ಕು ಜಿಲ್ಲೆಗಳಲ್ಲಿ ಜಾರಿಮಾಡಿದರೆ ಯಾವರೀತಿ ನಡೆಯುತ್ತದೆ ಎಂಬುದನ್ನು ನೋಡಿಕೊಂಡು ಮುಂದುವರಿಯುತ್ತೇವೆ ಎಂದರೆ ಖಂಡಿತ ಸಾಧ್ಯವಾಗುವುದಿಲ್ಲ. ಆ ರೀತಿ ನೀವು ಪರೀಕ್ಷೆಮಾಡಬೇಕಾಗಿದ್ದರೆ ಇಡೀ ಸಂಸ್ಥಾನದಲ್ಲಿ ಪೂರ್ತಿಯಾಗಿ ಪಾನನಿರೋಧಮಾಡಿ. ಆಗ ಯಶಸ್ವಿಯಾಗಿ ನಡೆಯುತ್ತದೆಯೇ ಇಲ್ಲವೇ ಎಂಬುದು ಗೊತ್ತಾಗುತ್ತದೆ. ಈಗ ನೀವು ಜಾರಿಮಾಡುತ್ತಿರುವಂತೆ ಮುಂದುವರಿದರೆ ಕುಡಿಯುವುದರ ಜೊತೆಗೆ, ಕದ್ದುಕುಡಿಯುವುದನ್ನು ಕಲಿಸಿದ ಹಾಗಾಗುತ್ತದೆ. ಜನಗಳ ನೈತಿಕಮಟ್ಟ ಅಧೋಗತಿಗೆ ಇಳಿಯುತ್ತದೆ. ಈಗಿನ ರಾಜ್ಯಾಂಗದ ಪ್ರಕಾರ ಜನಗಳ ನೈತಿಕಮಟ್ಟ ಹೆಚ್ಚಬೇಕು, ಅದು ನಿಮ್ಮ ಜವಾಬ್ದಾರಿ, ಅದರಲ್ಲಿ ಕರ್ತವ್ಯರೋಪಮಾಡಿಕೊಳ್ಳಬೇಡಿ. ಇಷ್ಟುಮಾತ್ರ ಹೇಳಿ ಶ್ರೀವಾರ್ ಬೋರಣ್ಣಗೌಡರು ಮತ್ತು ಈ ಸಭೆಯವರು ನನ್ನ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—Amendment moved:

"For the words 'Hassan District' substitute the words remaining districts."

Discussion on this resolution will be continued to-morrow.

The House will now adjourn for the day and meet to-morrow at 8-30 A.M.

The Assembly adjourned at Fifteen Minutes past Six of the Clock to meet again at Thirty Minutes past Eight of the Clock on Thursday, 1st February 1951.

WD 2915—GPB—500—19-3-51